**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |

# ಬೃಹಚ್ಚರಣ

**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – 25,000/- |
| ಪೋಷಕರು | – 5,000/- |
| ಸದಸ್ಯತ್ವ | – 1,000/- |
| ವಾರ್ಷಿಕ ನಿರ್ವಹಣೆ | – 250/- |

ಸಂಪುಟ : 6 ಸಂಚಿಕೆ : 1 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜನವರಿ–ಮಾರ್ಚ್ 2016

## ಅರ್ಪಣೆ



ಈ ಸಂಚಿಕೆಯನ್ನು
ನಮ್ಮ ಸಮುದಾಯದ
ಹಿತೈಷಿಗಳಾದ
ಎಸ್. ವೆಂಕಟಾಚಲಯ್ಯ
ಅವರಿಗೆ ಶ್ರದ್ಧೆ ಹಾಗೂ
ಗೌರವಗಳಿಂದ ಅರ್ಪಿಸಲಾಗಿದೆ


## ಸಂಪಾದಕೀಯ



ಆತ್ಮೀಯರೇ, ನಮಸ್ಕಾರ

ಯುಗಾದಿ ಹಬ್ಬದ ಶುಭಾಶಯಗಳು.

ಚಿಣ್ಣರಿಂದ ಹಿಡಿದು ಹಿರಿಯ ಚೇತನರ ವರೆಗೆ ನಮ್ಮ 'ಬೃಹಚ್ಚರಣ' ಪತ್ರಿಕೆ ಮೆಚ್ಚುಗೆಯಾಗುತ್ತಿರುವುದಕ್ಕೆ ಸಂತೋಷ. ತಮ್ಮ ಸಹಕಾರಕ್ಕೆ ಧನ್ಯವಾದಗಳು.



ನಿಮ್ಮವ

■ **ಕೆ.ಸಿ.ನಟರಾಜನ್**

ಸಂಪಾದಕ, 9845113475



## ಯುಗಾದಿ ಆಚರಣೆ

ಯುಗಾದಿ ಶುಭ ದಿನ, ದೇವರಿಗೆ ಭಕ್ತಿಯ ನಮನ ॥
ಬೆಳಗ್ಗೆ ಅಭ್ಯಂಜನ, ಬಂಧು ಬಳಗ ಆಗಮನ ॥
ನವಗ್ರಹ ಆರಾಧನ, ಬೇವು ಬೆಲ್ಲ ಸವಿಯೋಣ
ಕಷ್ಟ ಸುಖದಿ ಭಾಗಿಯಾಗೋಣ, ನಂತರ ಸಿಹಿಭೋಜನ ॥
ಸಂಜೆಗೆ ಪಂಚಾಂಗ ಶ್ರವಣ, ರಾತ್ರಿಗೆ ಸುಖ ಶಯನ ॥
ಸಂತಸದಿ ಹಬ್ಬ ಆಚರಿಸೋಣ, ಬಾಳು ಸಾರ್ಥಕ ಮಾಡೋಣ ॥

**ಭ್ರಮರಾ ಗೋಪಿನಾಥ್**

## ಶ್ರದ್ಧಾಂಜಲಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಿಂದಿನ ಅಧ್ಯಕ್ಷರಾದ
ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರು ನಮ್ಮನ್ನಗಲಿರುವುದಕ್ಕೆ
ಬೃಹಚ್ಚರಣ ಸಂಘ ಶ್ರದ್ಧಾಂಜಲಿ ಅರ್ಪಿಸುತ್ತದೆ.

– ಸಂ.

## ನಾಗಾರಾಧನೆಯ ವಿಶೇಷಾಂಕ



## ಅಧ್ಯಕ್ಷರ ನುಡಿ

ಬೃಹಚ್ಚರಣ ಬಂಧುಗಳಿಗೆ ನಮಸ್ಕಾರ

ತಮಗೂ ತಮ್ಮ ಕುಟುಂಬದ ಸದಸ್ಯರಿಗೆಲ್ಲಾ ದುರ್ಮುಖಿನಾಮ ಸಂವತ್ಸರ, ಶ್ರೀರಾಮನವಮಿ ಹಾಗೂ ಶ್ರೀ ಶಂಕರಜಯಂತಿಯು ಶುಭ ತರಲೆಂದು ಕಾರ್ಯಕಾರಿ ಸಮಿತಿಯ ಪರವಾಗಿ ಹಾರೈಸುತ್ತೇನೆ. ನಾಗೇಶ್ವರ ಕ್ಷೇತ್ರ, ಕಿತ್ತಿಗಾನಹಳ್ಳಿಯಲ್ಲಿ ದಿನಾಂಕ 13.03.2016ರಂದು ತಮ್ಮೆಲ್ಲರ ಸಹಕಾರದಿಂದ ನಡೆದ ನಾಗಾರಾಧನಾ ದೇವತಾಕಾರ್ಯದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನಮ್ಮವರು ಭಾಗವಹಿಸಿದ್ದುದು ಅತ್ಯಂತ ಹರ್ಷದಾಯಕವಾಗಿದೆ. ಈ ಸಂದರ್ಭದಲ್ಲಿ ಅನ್ನದಾನ ನಿಧಿಗೆ ಉದಾರವಾಗಿ ದೇಣಿಗೆ ನೀಡಿದ ನಮ್ಮವರಿಗೆ ಧನ್ಯವಾದಗಳು.

ಧಾರ್ಮಿಕ ಕಲಾಪಗಳನ್ನೊಳಗೊಂಡ ನಾಗಾರಾಧನೆಯು ಅಚ್ಚುಕಟ್ಟಾಗಿ ಜರುಗಿತು. ಇದಕ್ಕೆ ಸಹಕರಿಸಿದ ಸ್ಥಳೀಯ ಸಹೃದಯ ವಿಪ್ರವೃಂದದ ಸದಸ್ಯರ ಹಾಗೂ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ಅವಿರತ ಪರಿಶ್ರಮ ಮರೆಯಲಾಗದು. ಅವರಿಗೆಲ್ಲಾ ಸಂಘದ ಪರವಾಗಿ ಶುಭಾಶಯಗಳು. ಪ್ರಾಯೋಜಕರು, ದಾನಿಗಳು, ಹೊಸ ಸದಸ್ಯರು, ಪೋಷಕರಿಗೆಲ್ಲಾ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವರು ಶ್ರೀ ಶ್ರೀನಿವಾಸ ದೇವರು ಸನ್ಮಂಗಳವನ್ನು ಉಂಟುಮಾಡಲೆಂದು ಆಶಿಸುತ್ತೇನೆ.



ತಮ್ಮವ,

■ **ಎಸ್. ಸೋಮಸುಂದರ**

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

### ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ

### ಕಾರ್ಯಕಾರಿ ಸಮಿತಿ : 2015–2018

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 99001 13298** |
| ಉಪಾಧ್ಯಕ್ಷರು | : | **ಎಚ್.ಕೆ. ಶಶಿಧರ್, 98451 73766** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 98450 55582** |
| ಸಹಕಾರ್ಯದರ್ಶಿ | : | **ಅರುಣ್ ವಿ., 98801 66001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 99809 45699** |
| ಲೆಕ್ಕಪರಿಶೋಧಕರು | : | **ಎಸ್.ಸಿ. ಶ್ರೀನಿವಾಸ, 98453 76949** |
| ಗೌರವ ಸದಸ್ಯರು | : | **ಮಂಜುನಾರಾಯಣ್ ಕೆ. 98861 14279** |
| | | **ಟಿ.ಎಸ್. ಮಣಿ, 98451 76335** |
| | | **ಟಿ.ಎಸ್. ರಮೇಶ್, 96638 74531** |
| | | **ಟಿ.ಪಿ. ಸೂರ್ಯ ನಾರಾಯಣ, 99454 84268** |
| | | **ಸರಸ್ವತಿ ನಟರಾಜನ್, 94806 19730** |
| | | **ಕೆ. ಜಿ. ವೆಂಕಟೇಶ್, 99640 12687** |
| | | **ಆರ್. ಗಣೇಶ ಶ್ರೀಧರ್, 9880187686** |
| | | **ಟಿ. ನಾಗೇಶ್, 99806 62118** |
| | | **ಎ.ವಿ. ಮಂಜುನಾಥ, 98441 08202** |
| | | **ಸುಬ್ರಹ್ಮಣ್ಯಂ ಬೆಂಗಳೂರು, 94498 69667** |
| | | **ಕೆ.ಬಿ.ಎಸ್. ಶರ್ಮಾ, 94820 87344** |
| | | **ಅನಂತ ಕೆ.ಎಸ್. 97404 44222** |
| | | **ಶಂಕರ ಪ್ರಸಾದ್ ಬಿ.ಆರ್. 98456 63833** |

## ಧನ್ಯವಾದಗಳು

ಸಂಘದ ಶಾಶ್ವತ ಅನ್ನಸಂತರ್ಪಣಾ ನಿಧಿಗೆ ಉದಾರವಾಗಿ ದೇಣಿಗೆ ನೀಡಿದ ಮಹನೀಯರಿಗೆ ಸಂಘವು ಆಭಾರಿಯಾಗಿರುತ್ತದೆ.

| | |
|---|---|
| **ಶ್ರೀಮತಿ ಮತ್ತು ಶ್ರೀ ನೇತ್ರಾನಂದ** (ತಮ್ಮ ಮಾತಾಪಿತೃಗಳ ಹೆಸರಿನಲ್ಲಿ) | **ರೂ. 15,000/–** |
| **ಶ್ರೀಮತಿ ರುಕ್ಮಿಣಿ ಮತ್ತು ಶ್ರೀ ಶಿವರಾಂ** | **ರೂ. 10,001/–** |
| **ಶ್ರೀಮತಿ ಮತ್ತು ಶ್ರೀ ಬಿ.ಎನ್.ಜಿ. ಪ್ರಸಾದ್** | **ರೂ. 10,000/–** |
| **ಶ್ರೀಮತಿ ಕೃತಿ ಶೇಷಾಚಲಂ** | **ರೂ. 5,001/–** |
| **ಶ್ರೀಮತಿ ಮತ್ತು ಶ್ರೀ ಎನ್. ರಾಮು** | **ರೂ. 5,000/–** |
| **ಶ್ರೀಮತಿ ಸುನಂದಮ್ಮ** | **ರೂ. 5,000/–** |
| **ಶ್ರೀಮತಿ ಮತ್ತು ಶ್ರೀ ಶಿವಪ್ರಕಾಶ್** (ಜೆ.ಡಿ. ಸತ್ಯನಾರಾಯಣ್ ಅವರ ಹೆಸರಿನಲ್ಲಿ) | **ರೂ. 5,000/–** |
| **ಶ್ರೀಮತಿ ಸಂಧ್ಯಾ ಮತ್ತು ಶ್ರೀ ರಾಜೇಂದ್ರ** | **ರೂ. 5,000/–** |
| **ಶ್ರೀಮತಿ ಸಂಧ್ಯಾ ತಂದೆ ಶ್ರೀ ಈಶ್ವರಮೂರ್ತಿ(ನೆನಪಿನಲ್ಲಿ)** | **ರೂ. 5,000/–** |

## ಅಭಿನಂದನೆ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೂತನ ಅಧ್ಯಕ್ಷರಾಗಿ ಶ್ರೀ ಕೆ.ಎನ್. ವೆಂಕಟನಾರಾಯಣ್‌ರವರು ಹಾಗೂ ಕಾರ್ಯದರ್ಶಿಗಳಾಗಿ ಶ್ರೀ ಬಿ.ಎಸ್. ರವಿಶಂಕರ್ ಆಯ್ಕೆಯಾಗಿದ್ದಾರೆ. ನಮ್ಮ ಬೃಹಚ್ಚರಣ ಸಂಘವು ಶ್ರೀಯುತರಿಬ್ಬರನ್ನೂ ಅಭಿನಂದಿಸುತ್ತದೆ. ಶ್ರೀಯುತರುಗಳು ಬ್ರಾಹ್ಮಣ ಸಮುದಾಯ ಸೇವಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಗಳಿಸಿದ್ದು ಮುಂದೆಯೂ ಬ್ರಾಹ್ಮಣರ ಸರ್ವತೋಮುಖ ಏಳಿಗೆಗೆ ಶ್ರಮಿಸಲೆಂದು ಸಂಘ ಆಶಿಸುತ್ತಾ ತನ್ನ ಪೂರ್ಣ ಸಹಕಾರವನ್ನು ಬ್ರಾಹ್ಮಣ ಮಹಾಸಭಾಗೆ ನೀಡಲಿದೆ.

### ಅರ್ಪಣೆ

## ಎಸ್.ವೆಂಕಟಾಚಲಯ್ಯ

ಕಿತ್ತಿಗಾನಹಳ್ಳಿಯ ಸೂರಪ್ಪ ಹಾಗೂ ಸುಬ್ಬಮ್ಮನವರ ದ್ವಿತೀಯ ಪುತ್ರ. ಬೃಹಚ್ಚರಣ ಬಂಧುಗಳಿಗೆ, ಸ್ನೇಹಿತರಿಗೆ 'ಎಸ್.ವಿ.' ಎಂತಲೇ ಪರಿಚಿತರಾಗಿದ್ದವರು. ವಿದ್ಯಾಭ್ಯಾಸದ ನಂತರ ಚಿಕ್ಕಪೇಟೆಯ ಲಿಂಡರ್ ಅಂಡ್ ಕಂಪನಿಯಲ್ಲಿ ಕೆಲವು ವರ್ಷ ವೃತ್ತಿ. ನಂತರ 1982ರಲ್ಲಿ ತಮ್ಮ ಸ್ವಂತ ಉದ್ಯೋಗದ ಸಂಸ್ಥೆ ಎಸ್.ವಿ.ಸ್ಟೇಷನರೀಸ್ ಸ್ಥಾಪನೆ.

ಬಾಲ್ಯದ ದಿನಗಳಿಂದಲೂ ತಮ್ಮ ಜೀವನ ಶೈಲಿಯಲ್ಲಿ ಕಟ್ಟು ನಿಟ್ಟಾದ ವ್ಯಕ್ತಿತ್ವ. ಆಹಾರ, ಉಡುಗೆ, ತೊಡುಗೆಗಳಲ್ಲಿ ಬಹಳಷ್ಟು ಶಿಸ್ತು. ಸ್ವಲ್ಪ ಗಂಭೀರ ಸ್ವಾಭಾವ ಎನಿಸಿದರೂ ಹೃದಯ ಶ್ರೀಮಂತಿಕೆಯ ವ್ಯಕ್ತಿ.

ಬೃಹಚ್ಚರಣರನ್ನು ಒಟ್ಟುಗೂಡಿಸುವುದರ ಜೊತೆಗೆ ಸಂಘದ ಕೆಲಸ ಕಾರ್ಯಗಳು, ಅಭಿವೃದ್ಧಿಗೆ ಅವರ ಕೊಡುಗೆ ಅಪಾರ. ಇದಕ್ಕೆ ನಿದರ್ಶನ ಎಂಬಂತೆ ಸಂಘದ ವತಿಯಿಂದ ಮೊದಲ ಬಾರಿಗೆ ಕ್ಷೇತ್ರದಲ್ಲಿ ಸಾಮೂಹಿಕ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದ ಕಾರ್ಯಕ್ರಮ ಆಯೋಜನೆಯಲ್ಲಿ ಪ್ರಮುಖ ಪಾತ್ರ.

ಮೊದಲಿನಿಂದಲೂ ಇವರ ಕುಟುಂಬದ ಸದಸ್ಯರು ಅನೇಕ ರೀತಿಯಲ್ಲಿ ಬೃಹಚ್ಚರಣ ಸಂಘದ ಅಭಿವೃದ್ಧಿಗೆ ಸಾಕಷ್ಟು ಕೊಡುಗೆ ನೀಡಿದವರು. ಇವರ ಸೋದರ ಎಸ್.ಶ್ರೀನಿವಾಸಯ್ಯ ಅವರು 35 ವರ್ಷ ಸಂಘದ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಣೆ. ಇವರ ಕಿರಿಯ ಸೋದರ ಎಸ್.ಸತ್ಯನಾರಾಯಣ ಈಗ ಸಂಘದ ಖಜಾಂಚಿ.

ಎಸ್.ವಿ.ಯವರ ಪುತ್ರರಾದ ವಿ.ಅರುಣ್ ಮತ್ತು ವಿ.ಅಶೋಕ್ ತಂದೆಯವರು ಪ್ರಾರಂಭಿಸಿದ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ವಿ.ಅರುಣ್ ಅವರು ತಮ್ಮ ತಂದೆಯವರಂತೆ ಎಲ್ಲ ಬೃಹಚ್ಚರಣರಿಗೆ ಚಿರು ಪರಿಚಿತರು, ಹಾಗೂ ಸಂಘದ ಹಾಲೀ ಸಹಕಾರ್ಯದರ್ಶಿ.

15.03.1941ರಂದು ಜನಿಸಿದ ಎಸ್.ವಿ.ಯವರ ಈ 75ನೇ ಹುಟ್ಟು ಹಬ್ಬದ ಸಂದರ್ಭದಲ್ಲಿ ಬೃಹಚ್ಚರಣ ಸಂಘದ ವತಿಯಿಂದ ಅವರ ಆತ್ಮಕ್ಕೊಂದು ಗೌರವದ ಅರ್ಪಣೆ.

ಎಸ್.ವಿ.ಯವರು ನಮ್ಮನ್ನು 21.09.2005ರಂದು ಅಗಲಿದರಾದರೂ, ಅವರ ನೆನಪು ಸದಾ ಹಸಿರು.

**–ಸಂ.**

## ನಮ್ಮನ್ನಗಲಿದ ನಮ್ಮವರಿಗೆ–ಸಂಘದ ಶ್ರದ್ಧಾಂಜಲಿ

**ಶ್ರೀ ವೆಂಕಟಸುಬ್ಬಯ್ಯರ್** (94), 1.2.2016 ಸಂಘದ ಸದಸ್ಯ ಎಸ್. ಶ್ರೀನಿವಾಸನ್‌ರವರ ತಂದೆ.

**ಶ್ರೀಮತಿ ಸಾವಿತ್ರಮ್ಮ** (95), 2.2.2016 ಸದಸ್ಯ ಬಿ.ಸಿ. ಸತ್ಯನಾರಾಯಣ ಮತ್ತು ಬಿ.ಸಿ. ರಮೇಶ್ ಬಾಬುರವರ ತಾಯಿ.

**ಶ್ರೀಮತಿ ಭಾಗ್ಯಲಕ್ಷ್ಮಿ** (81), 29.01.2016 ಸಣ್ಣೆ ಡಾ. ಕೃಷ್ಣನ್‌ರವರ ಪತ್ನಿ

**ಶ್ರೀ ಎಸ್.ಆರ್. ವಿಶ್ವನಾಥನ್** (78), 20.02.2016 ಸದಸ್ಯ ಶ್ರೀ ಮಂಜುನಾಥ್‌ರವರ ತಂದೆ.

# ನಾಗೇಶ್ವರ ಕ್ಷೇತ್ರದಲ್ಲಿ ನಾಗಾರಾಧನೆ





ಆನೇಕಲ್ ತಾಲ್ಲೂಕು, ಕಿತ್ತಿಗಾನಹಳ್ಳಿ ನಾಗೇಶ್ವರ ಕ್ಷೇತ್ರದಲ್ಲಿ 13.03.2016ರ ಭಾನುವಾರದಂದು ನಾಗಾರಾಧನೆ ಧಾರ್ಮಿಕ ಕಾರ್ಯಕ್ರಮವು ಎಂದಿನಂತೆಯೇ ಈ ಬಾರಿಯೂ ಅಚ್ಚುಕಟ್ಟಾಗಿ ನಡೆಯಿತು.

ಕ್ಷೇತ್ರದ ದೇವಾಲಯದ ದೇವರುಗಳಿಗೆ ಸಂಕಲ್ಪ ಸಮೇತ ಅಭಿಷೇಕ–ಹೋಮ, ಪೂಜೆಯಿಂದ ದೇವತಾ ಕಾರ್ಯಕ್ರಮಗಳನ್ನು ವೇದಬ್ರಹ್ಮ ಶ್ರೀ ನಂಜುಂಡದೀಕ್ಷಿತರ ನೇತೃತ್ವದಲ್ಲಿ ಪ್ರಾರಂಭಿಸಲಾಯಿತು. ನಾಗರ ಕಟ್ಟೆಯಲ್ಲಿ ಕುಟುಂಬ ಸಮೇತರಾಗಿ ಆಗಮಿಸಿದ ಸಮುದಾಯದ ಭಕ್ತಾದಿಗಳು ಬೆಳಗ್ಗೆ 9 ಗಂಟೆಯಿಂದಲೇ ನಾಗಪ್ಪನಿಗೆ ಹಾಲು, ತನಿ ಎರೆದು ಪೂಜಾ ಕೈಂಕರ್ಯಗಳನ್ನು ಪ್ರಾರಂಭಿಸಿದರು. ಅಲಂಕೃತ ವಳ್ಳಿ, ದೇವಯಾನಿ ಸಮೇತ ಶ್ರೀ ಸುಬ್ರಹ್ಮಣ್ಯ ಸ್ವಾಮಿಯನ್ನು ಮಂಗಳವಾದ್ಯದೊಂದಿಗೆ ಮೆರವಣಿಗೆಯಲ್ಲಿ ನಾಗರಕಟ್ಟೆಗೆ ಸ್ವಯಂ ಸೇವಕರೇ ಕರೆತಂದರು. ಇದೇ ಸಂದರ್ಭದಲ್ಲಿ ಶ್ರದ್ಧಾಭಕ್ತಿಯಿಂದ ತನಿ ಎರೆದ ಕುಟುಂಬದವರು ವಟುಗಳಿಗೆ ಪೂಜಿಸಿ ವಸ್ತ್ರದಾನ, ದಕ್ಷಿಣೆ ನೀಡಿ ಕೃತಾರ್ಥರಾದರು. ಅನ್ನ ಸಂತರ್ಪಣಾ ನಿಧಿಗೆ ದೇಣಿಗೆ ನೀಡಿದ ದಾನಿಗಳ ಹೆಸರುಗಳಿಗೆ ವೇದಬ್ರಹ್ಮ ಶ್ರೀ ಬದರಿಶರ್ಮರಿಂದ ಸಂಕಲ್ಪ ಸಮೇತ ಭಗವಂತನಿಗೆ ಪೂಜೆ ಸಲ್ಲಿಸಲಾಯಿತು.

ಪ್ರತಿ ವರ್ಷದಂತೆ ಈ ಬಾರಿಯೂ ರಾಜಾಪುರದ ಶೇಖ್‌ದಾರ್ ಕೃಷ್ಣಮೂರ್ತಿ ಕುಟುಂಬದವರು ಪಾನಕ, ಕೋಸಂಬರಿ, ಹುಳಿ ಅವಲಕ್ಕಿ ವಿತರಿಸಿದರು.

ನಾಗಾರಾಧನೆಯು ಭಾನುವಾರವಾದುದರಿಂದ ಸಾವಿರಕ್ಕೂ ಹೆಚ್ಚು ಬಂಧುಗಳು ಆಗಮಿಸಿ, ಭಗವಂತನ ಕೃಪೆಗೆ ಪಾತ್ರರಾಗಿದ್ದು, ಸಂಘಕ್ಕೆ ತೃಪ್ತಿ ತಂದುಕೊಟ್ಟಿತು.

ಸಾವಿರಾರು ಬಂಧುಗಳಿಗೆ ಪ್ರಸಾದ ರೂಪದಲ್ಲಿ ಭೋಜನ ತಯಾರಿಸಿ, ಉಣ ಬಡಿಸಿದ ಬಾಣಸಿಗ ಬಾಂಧವರಿಗೆ ಸಂಘದಿಂದ ಈ ಬಾರಿ ಪಂಚೆ, ಶಲ್ಯ ಉಡುಗೊರೆ ನೀಡಲಾಯಿತು. ನಾಗಾರಾಧನೆ ಧಾರ್ಮಿಕ ಸಮಾರಂಭದಲ್ಲಿ ಸಂಘದ ಕಾರ್ಯಕರ್ತರೊಂದಿಗೆ ಸ್ವಯಂ ಸೇವಕರಾಗಿ ದೇಣಿಗೆ ಸ್ವೀಕರಿಸುವ ತಂಡದಲ್ಲಿ, ಪ್ರಸಾದ ವಿನಿಯೋಗಿಸುವಲ್ಲಿ, ಸುಬ್ರಹ್ಮಣ್ಯ ದೇವರ ಉತ್ಸವದಲ್ಲಿ, ಭೋಜನ ಪ್ರಸಾದ ಬಡಿಸುವುದರಲ್ಲಿ ಸಹಕಾರ ನೀಡಿದ ವಿಪ್ರ ಸ್ವಯಂ ಸೇವಕರಿಗೆಲ್ಲಾ ಸಂಘ ಆಭಾರಿ. ದೇಣಿಗೆ ನೀಡಿದ ಸರ್ವರಿಗೂ ಸಂಘ ಅಭಿನಂದಿಸುತ್ತದೆ.

ರಾಜಾಪುರದ ದಿವಂಗತ ಗೋಪಾಲಯ್ಯನವರ 100ನೇ ಜನ್ಮದಿನದ ನೆನಪಿಗಾಗಿ ಅವರ ಕುಟುಂಬದ ಸದಸ್ಯರು ಎಲ್ಲರಿಗೂ ಒಬ್ಬಟ್ಟು ಉಣಬಡಿಸಿದರು.

ಹಿಂದಿನ ವರ್ಷ ಅನ್ನದಾನ ನಿಧಿಗಾಗಿ ಹುಂಡಿ ತೆಗೆದುಕೊಂಡು ಹೋದವರಿಂದ ರೂ. 18,744/– ಸಂದಾಯವಾಗಿರುವುದು ಸಂತೋಷದ ವಿಷಯ.

ಇದೇ ರೀತಿ ಬೃಹಚ್ಚರಣ ಬಂಧುಗಳು ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಬೇಕೆಂದು ಸಂಘ ಆಶಿಸುತ್ತದೆ.

**–ಲಲಿತಾ ರಮೇಶ್**





## ನಾಗಾರಾಧನಾ ಅನ್ನಸಂತರ್ಪಣಾ ನಿಧಿಗೆ ದೇಣಿಗೆ ನೀಡಿದ ದಾನಿಗಳು

*ಶ್ರೀಯುತರಾದ*
ಅಶ್ವಥ್‌ನಾರಾಯಣನ್ ಆರ್.ಎಸ್.
ಕೆ.ಆರ್. ಗಿನಿ
ರವಿಶಂಕರ್
ಟಿ.ಪಿ. ಜಗನ್ನಾಥ್ ಮತ್ತು
ಕುಟುಂಬ
ಸುಬ್ಬರಾವ್
ತಾರಾ ರವೀಂದ್ರ
ಲತಾ ಮುರಳಿ
ವಿಶ್ವಾಸ್ ಎಂ.ಆರ್.
ಕಾರ್ತಿಕ್ ಮತ್ತು ಕೌಶಿಕ್
ಅನಂತಮ್
ಶ್ರೀಕಾಂತ್ ಜಿ.
ಸೌಮ್ಯ ಮಧುಸೂಧನ್
ಡಾ. ಶ್ರೀಕಂಠಯ್ಯ, ಮುಗಳೂರು
ಲಕ್ಷ್ಮೀ ನಾರಾಯಣನ್
ಉಮಾ
ಜಯರಾಮನ್
ಗೋಪಾಲಸ್ವಾಮಿ ಮತ್ತು ಕೃಷ್ಣಪ್ಪ
ಶಂಕರ್
ರವಿ ಶಂಕರ್
ರಾಮಚಂದ್ರ ಎಸ್.
ಆರ್.ಎನ್. ಕುಮಾರ್
ಆಶಾ ಕುಮಾರ್
ವನಜಾಕ್ಷಿ
ಸೂರ್ಯನಾರಾಯಣನ್ ಬಿ.ಎಸ್.
ಸುಂದರ್ ಎನ್.ವಿ.
ನಾಗರಾಜನ್
ಲತಾ ಎಸ್.ಆರ್.
ಅನುರಾಧ
ಸುಬ್ಬಣ್ಣ ಜಿ.ವಿ.
ವೆಂಕಟೇಶ ಬಾಬು
ಶ್ರೀಕಂಠ
ರಘು ಈಶ್ವರನ್
ಕೆ.ಬಿ. ದಾಸ್
ಶ್ರೀಧರ್ ಎ.ಸಿ.
ನರೇಂದ್ರ
ಅಕ್ಷಯ್ ಕಶ್ಯಪ್
ರಾಜಾ ಶಿವಪ್ರಸಾದ್
ಪಾರ್ವತಮ್ಮ
ಎ.ವಿ. ಸುಂದರ್
ಗೋಪಾಲರಾವ್
ಎ. ಶ್ರೀನಿವಾಸ್
ವೆಂಕಟಸುಬ್ಬರಾವ್ ಆರ್.ಎನ್.
ಮುರಳೀಕೃಷ್ಣ ಸಿ.

ಶಂಕರ ಪ್ರಸನ್ನ
ಶ್ರೀನಿವಾಸನ್ ಎಸ್.
ಕೃಷ್ಣಸ್ವಾಮಿ ಛಾಯಾಪತಿ
ರಾಘವ ಪ್ರಸಾದ್ ಎಸ್.ಸಿ.
ಸುಬ್ರಹ್ಮಣ್ಯಂ ಬಿ.
ಲಲಿತಾ ಮೂರ್ತಿ
ಆರ್.ಎಸ್. ವೆಂಕಟೇಶ್
ಮಂಜುಳಾ ಗೋಪಾಲಕೃಷ್ಣ
ರಾಜಮ್ಮ
ಜಿ.ಎಸ್. ನಾಗರಾಜ್
ಗೋವಿಂದರಾಜು
ಜಯರಾಮನ್ ಎಂ.ಆರ್.
ಸರಸ್ವತಿ ಬಿ.ಪಿ.
ವಿಮಲಾ
ಗೌರಮ್ಮ ಜಿ.ಎಸ್.
ಸುಬ್ಬಲಕ್ಷ್ಮಿ
ಅಮ್ಮಯಮ್ಮ ಮತ್ತು ದಾನಪ್ಪ
ನಡವತ್ತಿ ಸೂರ್ಯಪ್ರಕಾಶ್
ಕೆ.ಬಿ.ಎಸ್. ಶರ್ಮಾ
ರಾಧಾಕೃಷ್ಣ
ಶ್ಯಾಮಲಾ ನಾರಾಯಣಸ್ವಾಮಿ
ರವಿಶಂಕರ್
ವಿಜಯ್ ವಿ.
ವಿದ್ಯಾ ವಿ. ಶರ್ಮಾ
ರೇಣುಕಾ ಮುರಳೀಧರ ಆರ್.ವಿ.
ಎಂ.ಆರ್. ರವಿಶಂಕರ್
ಹೇಮಾವತಿ
ಗೋಪಾಲ್
ಶ್ಯಾಮ್ ಜಿ.ವಿ.
ರವಿ ರಾಧಾಕೃಷ್ಣ
ಮಂಗಳಾ ಅರುಣ್
ರವೀಂದ್ರ ರಾಮ್ ಟಿ.ಎನ್.
ಶಶಿಧರ್
ಕುಮಾರಸ್ವಾಮಿ
ರಾಮಕೃಷ್ಣ
ಈಶ್ವರನ್ ಎ.
ಲಕ್ಷ್ಮೀದೇವಮ್ಮ
ಡಾ. ವೆಂಕಟರಾಮಯ್ಯ ಮತ್ತು
ರತ್ನಮ್ಮ
ರಾಧಾಕೃಷ್ಣ ಕೆ.ವಿ.
ನಾಗರಾಜ್ ಕೆ.ಟಿ.
ಕೃಷ್ಣ ಎಸ್.
ಮಂಜುನಾಥ್ ಎ.ವಿ.
ಗುರುರಾವ್ ಎ.ಜಿ.
ವಿವೇಕ್ ಎನ್.

ಎಸ್.ಎಲ್. ಭಾನುಪ್ರಕಾಶ್
ಸುಧಾ
ವೆಂಕಟರಾಮಯ್ಯ
ರತ್ನಮ್ಮ
ವೆಂಕಟಾಚಲಯ್ಯ
ರವೀಂದ್ರ ಶರ್ಮಾ
ಕೆ.ಬಿ.ಎಸ್. ಮಣಿ
ಅನಂತರಾಮ್
ಮಂಜುನಾಥ್ ಕೆ.
ಶಂಕರ್ ಸಿ.ಕೆ.
ಕಾರ್ತಿಕ್
ರಾಜೇಶ್ವರಿ ಅಶೋಕ್
ಟಿ.ಎಸ್. ಕೃಷ್ಣನ್
ಟಿ.ವಿ.ಎಸ್. ಶರ್ಮಾ
ಆರ್.ವಿ.ಎಸ್. ಮಣಿಯನ್
ಸ್ವಾಮಿನಾಥನ್ ಆರ್.ಎನ್.
ಇಂದಿರಮ್ಮ
ಸತ್ಯನಾರಾಯಣನ್
ಗಿರಿಜಾ
ವೆಂಕಟೇಶ್ ಜಿ.ಎಸ್.
ಪಾರ್ವತಿ ಮತ್ತು ಲತಾ
ಪಾರ್ವತಿ ಸಿ.
ರವಿಶಂಕರ್
ಗಣೇಶ್ ಎನ್.
ಮೂರ್ತಿ ಚಂದ್ರಶೇಖರ್
ವೆಂಕಟೇಶ್ ಸಿ.
ಸೋಮಶೇಖರ್
ರಮೇಶ್ ಆರ್.ಎಸ್.
ವಾಸು
ಸುಂದರ್
ಶ್ರೀ ಹರಿ ಕಶ್ಯಪ್
ಎಸ್.ಆರ್. ನಾಗಮಣಿ
ಸುಬ್ರಹ್ಮಣ್ಯಂ ಎ.ಎಂ.
ರಾಜ ರಾಜೇಶ್ವರಿ
ವೆಂಕಟರಾಮ್
ನಾರಾಯಣಸ್ವಾಮಿ ಮಾವಳ್ಳಿ
ಕೆ.ಎಸ್.
ಶ್ರೀನಿವಾಸನ್ ಕೆ.ಎಸ್.
ಶ್ರೀನಾಥ್
ಪ್ರದೀಪ್ ಕುಮಾರ್ ಕೆ.ಎಲ್.
ಗಾಯತ್ರಿ ದೇವಿ ಸಾಯಿನಾಥ್
ಶ್ರೀನಿವಾಸ್
ಎಸ್.ವಿ.ಎನ್. ಮೂರ್ತಿ
ಜನಾರ್ಧನ್
ಕಿರಣ್ ಪಾರ್ಥಸಾರಥಿ

ಆರ್.ಎ. ನಾರಾಯಣ ರಾವ್
ಲಕ್ಷ್ಮಣ ಶರ್ಮಾ ಬೆಟ್ಟಕೋಟೆ
ಸತ್ಯನಾರಾಯಣ್
ಅಶೋಕ್ ಕುಮಾರ್ ಜಿ.
ವೇಣುಗೋಪಾಲ್ ಕೆ.ಎಲ್.
ಶಂಕರ ರಾವ್
ಪಾರ್ವತಿ ಗುರುಮೂರ್ತಿ
ನಾಗರತ್ನ ಶ್ರೀಧರ್
ಸುಬ್ರಮಣಿ
ಆರ್.ಕೆ. ಲಕ್ಷ್ಮೀ
ಗಾಯತ್ರಿ ಸತ್ಯನಾರಾಯಣನ್
ಸಂಪಂಗಿರಾಮನ್ ಕೆ.ಟಿ.
ಸುಮಿತ್ರಮ್ಮ ಆರ್.ಕೆ.
ದೀಪಿಕಾ ರಾಜೇಶ್
ಸತ್ಯನಾರಾಯಣನ್
ಶಿವಪ್ರಸಾದ್ ಆರ್.ಕೆ.
ಶ್ಯಾಮ್ ಪ್ರಸಾದ್ ಕೆ.ಎಸ್.
ಅನಂತರಾಘವನ್ ಮತ್ತು
ಕುಟುಂಬ
ಶೇಷಾಚಲಂ ಆರ್.ಜಿ.
ರಮೇಶ್ ಆರ್. (ಲಲಿತಾ)
ಶುಭಾ ಗಾಯತ್ರಿ
ಶಿವಕುಮಾರ್ ನಟರಾಜನ್
ಸುಬ್ಬರಾವ್
ಸಾವಿತ್ರಮ್ಮ ಆರ್.
ಸುಮಾ ಪ್ರಹ್ಲಾದ್ ಸರಫ್
ರಾಜೇಶ್ವರಿ ಅಶೋಕ್
ಟಿ.ಎಸ್. ಕೃಷ್ಣನ್
ಟಿ.ವಿ.ಎಸ್. ಶರ್ಮಾ
ಆರ್.ವಿ.ಎಸ್. ಮಣಿಯನ್
ಗೋಪಾಲಕೃಷ್ಣ ಆರ್.
ಅಮರನಾಥ್ ಬಿ.ಎಸ್.
ಉಮೇಶ್ ಆರ್.ಸಿ.
ಶಾರ್ವರಿ ಶ್ರೀನಿವಾಸನ್
ಲಕ್ಷ್ಮೀದೇವಿ ಜಿ.ಪಿ.
ಶಾಂತ ಲಕ್ಷ್ಮಿನಾರಾಯಣನ್
ರಂಗನಾಥ್ ಎಂ.ಪಿ.
ರಘುನಂದನ್ ಎಸ್.
ಡಾ. ಗುರುಪ್ರಸಾದ್ ಸಿ.ಎನ್.
ಸೋಮಸುಂದರ ಎಸ್.
ಪಂಕಜ ಮೂರ್ತಿ
ಬಿ.ಎನ್. ನಾಗರಾಜ್
ನಾಗಭೂಷಣ
ನಾಗರಾಜ್
ಪ್ರಭಾಕರ್ ನಟರಾಜ್

***ಸಂಘ, ಮಹನೀಯರಿಗೆಲ್ಲ ಶುಭ ಹಾರೈಸುತ್ತದೆ.***

# 2016ರ ನಾಗಾರಾಧನೆ

*ಛಾಯಾಚಿತ್ರ ಕೃಪೆ : ಶಿವಕುಮಾರ್ ಎನ್.*










# ನಾಗಾರಾಧನೆ



ಬೃಹಚ್ಚರಣ ಸಮುದಾಯದವರು ಅದರಲ್ಲೂ ಪ್ರಮುಖವಾಗಿ ಕೌಂಡಿಣ್ಯ ಸಗೋತ್ರದವರು ಹಲವು ತಲೆಮಾರುಗಳಿಂದ ಪ್ರತಿ ವರ್ಷವೂ ಕಿತ್ತಿಗಾನಹಳ್ಳಿಯ ನಾಗೇಶ್ವರ ಕ್ಷೇತ್ರದಲ್ಲಿ ನಾಗರಿಗೆ ತನಿ ಎರೆದು ಶ್ರದ್ಧೆ, ಭಕ್ತಿಯಿಂದ ಆಚರಿಸುವ ದೇವತಾ ಕಾರ್ಯ ಎಂದರೆ 'ನಾಗಾರಾಧನೆ'.

ಬಹಳ ಹಿಂದಿನ ದಿನಗಳಲ್ಲಿ ನಾಗಾರಾಧನೆಯಲ್ಲಿ ಪಾಲ್ಗೊಳ್ಳುವ ಭಕ್ತರಿಗೆ ಸಂಪರ್ಕ, ಸಾರಿಗೆ ಹಾಗೂ ಹಲವು ಮೂಲಭೂತ ಸೌಕರ್ಯಗಳ ಕೊರತೆ ಇತ್ತಾದರೂ, ಶ್ರದ್ಧಾ ಭಕ್ತಿಗಳಲ್ಲಿ ಕೊರತೆ ಕಾಣುತ್ತಿರಲಿಲ್ಲ.

ಬೃಹಚ್ಚರಣರು ಈ ಆರಾಧನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ನಾಗಾರಾಧನೆ ಜೊತೆಗೆ ಸಮುದಾಯದ ಇತರ ಕಾರ್ಯಕ್ರಮಗಳು ವ್ಯವಸ್ಥಿತವಾಗಿ ಮುಂದುವರೆಯಲು ಸಮುದಾಯದ ಸಂಘಟನೆಯ ಅವಶ್ಯಕತೆಯ ಕೊರತೆ ಇತ್ತು. ಕಾರಣ 1930-40 ದಶಕದಲ್ಲಿ ಪ್ರಾರಂಭವಾದ ಸಂಘವು ಸಾಕಷ್ಟು ಹಿರಿಯ ಪ್ರಮುಖರನ್ನು ಕಳೆದುಕೊಂಡು ಸಂಘದ ಚಟುವಟಿಕೆಗಳು ನಿಷ್ಕ್ರಿಯ ಪರಿಸ್ಥಿತಿ ತಲುಪಿತ್ತು.

1980ರಲ್ಲಿ ಪುನಃಚೇತನ ಪಡೆದ ಬೃಹಚ್ಚರಣ ಸಂಘ ತನ್ನ ಕಾರ್ಯ ಚಟುವಟಿಕೆಗಳನ್ನು ಮತ್ತೆ ಪ್ರಾರಂಭಿಸಿ ಸಂಘಟನೆಗೆ ಪರಿಶ್ರಮದ ಕೊಡುಗೆ ನೀಡುವಲ್ಲಿ ಯಶಸ್ವಿಯಾಯಿತು.

ಆದರೆ, ಬದಲಾದ ಕಾಲಘಟ್ಟದಲ್ಲಿ ಮುಂದಿನ ಪೀಳಿಗೆಯ ಯುವಕರು ಈ ಆರಾಧನೆಯನ್ನು ಮುಂದುವರೆಸಿಕೊಂಡು ಹೋಗುವ ಆಸಕ್ತಿ, ಮುತುವರ್ಜಿ ವಹಿಸುತ್ತಾರಾ ಎಂಬ ಸಣ್ಣದೊಂದು ಅನುಮಾನದ ಕೂಗು ಸಹಾ ಪ್ರಾರಂಭವಾಯಿತು. ಕಾರಣ ಅಂದಿನ ಸಂಘದ ಹಲವು ಹಿರಿಯ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಕಳೆದುಕೊಂಡದ್ದು, ಉಳಿದ ಹಲವರ ಆರೋಗ್ಯ, ಅನಾನುಕೂಲ, ವಯೋಮಾನ ಮುಂತಾದ ಹಲವಾರು ಕಾರಣಗಳಿಂದಾಗಿ ನಿವೃತ್ತಿ ಬಯಸಿದರು.

2010ರಲ್ಲಿ ಪುನರ್ ರಚನೆಯಾದ ಸಂಘದ ಹೊಸ ಕಾರ್ಯಕಾರಿ ಸಮಿತಿಯು ಕಾರ್ಯ ನಿರ್ವಹಣೆಯ ಜವಾಬ್ದಾರಿಯೊಂದಿಗೆ ಹಲವಾರು ಸಂಘಟನಾ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಕಾರ್ಯನಿರ್ವಹಿಸುವುದರ ಜೊತೆಗೆ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ. ನಾಗಾರಾಧನೆಯ ಕಾರ್ಯಕ್ರಮ, ಭೋಜನ ವ್ಯವಸ್ಥೆ, ಸಮುದಾಯದ 'ಬೃಹಚ್ಚರಣ' ತ್ರೈಮಾಸಿಕ ವಾರ್ತಾಸಂಚಿಕೆ, 'ಹಿರಿಯ ಚೇತನ'ರನ್ನು ಗುರುತಿಸಿ ಸನ್ಮಾನ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ,' ಶ್ರೀ ಶ್ರೀನಿವಾಸ ದೇವರ ಕಲ್ಯಾಣೋತ್ಸವ, ಒಂದು ದಿನದ ಪ್ರವಾಸ, ಸರ್ವ ಸದಸ್ಯರ ವಾರ್ಷಿಕ ಸಭೆ ಮುಂತಾದ ಹಲವು ಕಾರ್ಯಕ್ರಮಗಳು ಸುಗಮವಾಗಿ ನಡೆಯುತ್ತಿವೆ.

ಇಲ್ಲಿ ಪ್ರಮುಖವಾಗಿ ಗಮನಿಸತಕ್ಕ ಅಂಶವೆಂದರೆ, ಸಮುದಾಯದ ಪ್ರತಿಯೊಂದು ಕುಟುಂಬದ ಸದಸ್ಯರು ನೀಡುತ್ತಿರುವ ಪ್ರೋತ್ಸಾಹ, ಆರ್ಥಿಕ ನೆರವು ಮತ್ತು ಕಾರ್ಯಕಾರಿ ಸಮಿತಿಯ ಮೇಲಿಟ್ಟಿರುವ ವಿಶ್ವಾಸದಿಂದಾಗಿ, ಸಂಘವು ಮತ್ತಷ್ಟು ಕ್ರಿಯಾತ್ಮಕವಾಗಿ ಕಾರ್ಯ ನಿರ್ವಹಿಸಲು ನೆರವಾಗಿದೆ.

ಇದಕ್ಕೆ ಉದಾಹರಣೆ ಎಂಬಂತೆ 2016ರ ನಾಗಾರಾಧನೆಯಲ್ಲಿ ಸಮುದಾಯದವರು ದಾಖಲೆ ಸಂಖ್ಯೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಂದಿ ಕುಟುಂಬ ಸಮೇತ ಪಾಲ್ಗೊಂಡದ್ದು ಇದು ಸಂತಸದ ವಿಷಯ. ವಿಶೇಷವಾಗಿ ಸಾಕಷ್ಟು ಯುವಕರು ಸಕ್ರಿಯವಾಗಿ ಪಾಲ್ಗೊಂಡದ್ದು ಮತ್ತೂ ಪ್ರಶಂಸನೀಯ. ದೇಣಿಗೆ ರೂಪದಲ್ಲಿ ಸಮುದಾಯದವರು ನೀಡಿದ ಕಾಣಿಕೆ ಸಹಾ ಹೊಸ ದಾಖಲೆ ಸೃಷ್ಟಿಸಿದೆ. ನಾಗಾರಾಧನೆಯಲ್ಲಿ ಪಾಲ್ಗೊಂಡ ಯುವಕರ ಉತ್ಸಾಹ ಮುಂದಿನ ದಿನಗಳಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುವ ಭರವಸೆ ಮೂಡಿಸಿದೆ.

ನಾಗಾರಾಧನೆಯ ಆಚರಣೆಯ ರೀತಿ ರಿವಾಜು, ಪದ್ಧತಿ, ಕಟ್ಟುಪಾಡುಗಳ ಬಗ್ಗೆ ನಮ್ಮವರೇ ಹಲವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿರುವುದನ್ನು ಪರಿಶೀಲಿಸುವ ಅಗತ್ಯವಿದೆ.

ನಮ್ಮ ಜೀವನ ಶೈಲಿಯಲ್ಲಿ ಏನೇ ಬದಲಾವಣೆಗಳಾದರೂ, ಮೂಲ ಆಚರಣೆಯ ಪದ್ಧತಿಯಲ್ಲಿನ ಬದಲಾವಣೆ ಎಷ್ಟರಮಟ್ಟಿಗೆ ಸಮಂಜಸ ಎಂಬ ಪ್ರಶ್ನೆ ಸಹಜ.

ಹಿರಿಯ ಅನುಭವಸ್ಥರ ಪ್ರಕಾರ ನಾಗಾರಾಧನೆಯಂದು ಉಪವಾಸದೊಂದಿಗೆ ಒದ್ದೆಯಾದ ವಸ್ತ್ರ ಧರಿಸಿ, ತನಿ ಎರೆಯುವ ಪದ್ಧತಿ. ಇನ್ನು ಅಂದಿನ ಭೋಜನವೂ ಸಹಾ ಸಾಮಾನ್ಯವಾಗಿ ತಿಥಿ, ಶ್ರಾದ್ಧಗಳಲ್ಲಿ (ಬ್ರಹ್ಮಚರ್ಯದಲ್ಲಿ ಮರಣ ಹೊಂದಿದವರಿಗೆ ಮಾಡುವ ತಿಥಿ) ಮಡಿಯಿಂದ ತಯಾರಿಸುವ ಆಹಾರ ಪದಾರ್ಥಗಳ ವಿತರಣೆ ಮಾತ್ರ.

ಹಲವಾರು ಹಿರಿಯರು, ಮಾರ್ಗದರ್ಶಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಹೊರಗಡೆ ತಯಾರಿಸುವ ಸಿಹಿತಿಂಡಿಗಳನ್ನು ವಿತರಿಸುವ ಬಗ್ಗೆ ಸ್ವಲ್ಪ ಅಸಮಾಧಾನ ತೋರಿದ್ದಾರೆ. ಇದಕ್ಕೆ ಬದಲಾಗಿ ನಾಗಾರಾಧನೆಯಂದು ಮಡಿಯಿಂದ ಕ್ಷೇತ್ರದಲ್ಲೇ ಪದಾರ್ಥಗಳನ್ನು ತಯಾರಿಸಿ ವಿತರಿಸುವಂತೆ ಸಲಹೆ ಸಹಾ ನೀಡಿರುತ್ತಾರೆ.

ಶ್ರದ್ಧೆ, ಭಕ್ತಿಯಿಂದ ಆಚರಿಸುವ ಆರಾಧನಾ ಪದ್ಧತಿಗಳನ್ನು, ಕಟ್ಟುಪಾಡುಗಳ ಚೌಕಟ್ಟಿನಲ್ಲಿ ಆಚರಿಸುವುದರಿಂದ, ಆಯಾ ಕುಟುಂಬಗಳಿಗೆ ಶ್ರೇಯಸ್ಸು, ಒಳಿತು ಎನ್ನುವ ಉದ್ದೇಶ, ಅಭಿಪ್ರಾಯ ಮಾತ್ರ. ಹಾಗಾಗಿ ಅನ್ಯಥಾ ಭಾವಿಸದಿರಲು ಕಳಕಳಿಯ ಮನವಿ. ಅಂದಿನ ದಿನ ಆರಾಧನೆಗೆ ಸರಿ ಎನಿಸುವ ಭಕ್ಷ್ಯಗಳಾದ ಸಜ್ಜಪ್ಪ, ರವೆಉಂಡೆ, ಮುಂತಾದವುಗಳನ್ನು ಅಲ್ಲೇ ತಯಾರಿಸಿ ಊಟ ಬಡಿಸುವುದು ಪ್ರಾಯೋಜಕರ ಕುಟುಂಬಗಳಿಗೆ ಶ್ರೇಯಸ್ಕರ ಎಂಬ ಭಾವನೆ.

'ನಾಗಾರಾಧನೆ' ಸಂಭ್ರಮದ ಆಚರಣೆಯಲ್ಲ, ಹಾಗಾಗಿ ಹಿಂದಿನಿಂದ ನಡೆದುಕೊಂಡುಬಂದ ಆಚರಣೆ, ಪದ್ಧತಿಗಳಿಗೆ ಚ್ಯುತಿ ಬರದಿರಲಿ ಎಂಬ ಅನಿಸಿಕೆ ಮಾತ್ರ !!!

ಧನ್ಯವಾದಗಳು.



■ವಿ.ಎಸ್.ಮಣಿ
98450 55582

# ನಮಗೆಷ್ಟು ಗೊತ್ತು ಶಿವನ ಬಗ್ಗೆ ?

**ರಾತ್ರಿಯೊಳು ಶಿವರಾತ್ರಿ। ಜಾತ್ರೆಯೊಳು ಶ್ರೀಶೈಲ।**
**ಕ್ಷೇತ್ರದೊಳು ಅಧಿಕ ಶ್ರೀ ಕಾಶಿ।**
**ಶಿವತತ್ತ್ವ ಸ್ತೋತ್ರದೊಳು ಅಧಿಕ – ಸರ್ವಜ್ಞ॥**

ಮಹಾಶಿವರಾತ್ರಿಯಂದು ಜ್ಯೋತಿರ್ಲಿಂಗ ಪ್ರಕಟವಾಯಿತು. ಅದೇ 'ಸ್ವಯಂಭುಲಿಂಗ'. ಭೂವ್ಯೋಮ ಸದೃಶದಿ ಆದಿ ಅಂತ್ಯವಿಲ್ಲದೆ ಅನಲ ಸ್ತಂಭ ಕಂಡು ಬ್ರಹ್ಮ, ಹರಿ, ಆಶ್ಚರ್ಯಪಟ್ಟರು. ಆ ಪ್ರಕಾಶದಿಂದ 'ಓಂ' ಎಂಬ ಪ್ರಣವಾಕ್ಷರಾದಿ ಎಲ್ಲೆಡೆ ನಾದ ಮೊಳಗಿತು. ಆ ನಾದ ಕೇಳಿ ಆನಂದಪಟ್ಟು ಪರೀಕ್ಷಿಸಲು ಬ್ರಹ್ಮ ಹರಿ ಹೊರಟರು. ಬ್ರಹ್ಮ ಹಂಸವೇರಿ ಗಗನಕ್ಕೇರಿದ. ಹರಿ ವರಾಹ ರೂಪ ತಾಳಿ ಪಾತಾಳಕ್ಕೆ ಇಳಿದ. ಇಬ್ಬರಿಗೂ ಆದಿ–ಅಂತ್ಯ ಸಿಗಲಿಲ್ಲ. ಮಧ್ಯದಿ ತಾಳೆ ಹೂ ಕಂಡು ಬ್ರಹ್ಮ ಸುಳ್ಳು ಸಾಕ್ಷಿ ಹೇಳಿ ಪೂಜೆಗೆ ಅನರ್ಹನಾದ. ಶ್ರೀಹರಿ ಸತ್ಯ ಹೇಳಿ ಪೂಜಾರ್ಹನಾದ.

ಮಾಸ ಶಿವರಾತ್ರಿ–ಮಹಾಶಿವರಾತ್ರಿ ಎರಡೂ ಆಚರಣೆ ಉಂಟು. ಅಲ್ಲದೆ ಸೋಮ ಪ್ರದೋಷ, ಮಹಾದೇವ ದ್ವಾದಶ, ಜ್ಯೋತಿರ್ಲಿಂಗ ರೂಪಾದಿ ಪ್ರಕಟನಾದುದಕ್ಕೆ ಹಲವಾರು ಪೂಜೆ ಉಂಟು.

**ನಾದರೂಪ ಶಿವ :** ಪಂಚಮುಖದಿ ಶಿವ ಪ್ರಕಟನಾದುದು ಹೇಗೆ ? ಬ್ರಹ್ಮ, ನಾರದ ಸಂವಾದದಿ ಬರುವ ವಿಷಯ ಶಿವಪುರಾಣದಲ್ಲಿದೆ. ಶಿವರಾತ್ರಿಯಂದು ಪ್ರಕಟನಾದ ಜ್ಯೋತಿರ್ಲಿಂಗ ಪ್ರಣವ 'ಓಂ' ಎಂಬ ನಾದ ಎಲ್ಲೆಡೆ ಮೊಳಗಿತು. ಇಂಪಾದ ನಾದ ಕೇಳಿ ಬ್ರಹ್ಮ, ಹರಿ ಆನಂದದಿ ಸ್ತುತಿಗೈದರು. ನಾದಬ್ರಹ್ಮ ಶಿವ ತನ್ನ ಶರೀರದ ಎಲ್ಲಾ ಭಾಗಗಳಿಂದ 'ಅ' ಕಾರ ಬ್ರಹ್ಮ, 'ಉ' ಕಾರ ಹರಿ, 'ಮ' ಕಾರ ಶಿವ. ಈ 'ಓಂ' ಪ್ರಣವಾಕ್ಷರ ಬೀಜ ಅಲಮಕಾರದ ಬೀಜ ಮಂತ್ರವಾಯಿತು. ಈ ಹಿರಣ್ಯಗರ್ಭ ಒಡೆದು ಪಂಚತತ್ತ್ವಗಳಿಂದ ಕೂಡಿದೆ. ಈ ತತ್ತ್ವವೇ ಪೃಥ್ವಿಲಿಂಗ, ಆಪೋಲಿಂಗ, ಅಗ್ನಿಲಿಂಗ, ವಾಯುಲಿಂಗ ಮತ್ತು ಆಕಾಶಲಿಂಗ. ಈ ಪಂಚಮುಖಿ ಶಿವರೂಪದ ಜೊತೆಯಲ್ಲಿ ಆದಿಶಕ್ತಿ 'ಉಮಾ' ಪ್ರಕಟವಾದಳು. ಈ ಶರೀರದಿಂದ ಸಕಲ ಅಕ್ಷರಗಳು ಉತ್ಪತ್ತಿ ಆಯಿತು. ಅದನ್ನೇ ಶ್ರೀ ಮುತ್ತುಸ್ವಾಮಿ ದೀಕ್ಷಿತರು 'ಅಕ್ಷರ ಸ್ವರೂಪ, ಅಮಿತ ಪ್ರತಾಪ, ಆರೂಢ ವೃಷಭ ವಾಹನ, ಜಗನ್ಮೋಹನ' ಎಂಬ ಶಂಕರಾಭರಣ ರಾಗ ಕೀರ್ತನೆಯಲ್ಲಿ ಹಾಗೂ ಶ್ರೀ ತ್ಯಾಗರಾಜರು 'ನಾದತನುಮನಿಶಂ ಶಂಕರಂ' ಬೇಗಡೆ ರಾಗದಲ್ಲಿ 'ನಾದೋಪಾಸನ ಜೇಸೇ ಶಂಕರ ನಾರಾಯಣ, ವಿಧುಲ ವೆಲೆ ಸಿರಿ ಓ ಮನಸಾ' ಎಂದಿದ್ದಾರೆ.

ಪಂಚಮುಖ ಶಿವನಿಂದ ಧರ್ಮಸ್ಥಾಪನೆಗೆ ಸಹಾಯವಾಗುವ 24 ಅಕ್ಷರಗಳಿಂದ 'ಗಾಯತ್ರಿ ಮಂತ್ರ' ಗೋಚರವಾಯಿತು. ಅಂತೆಯೇ ಮೃತ್ಯುಂಜಯ ಮಂತ್ರ, ಶಿವ ಪಂಚಾಕ್ಷರಿ ಮಂತ್ರ, ಚಿಂತಾಮಣಿ ಮಂತ್ರ ಸಾಕ್ಷಾತ್ಕಾರವಾಯಿತು. ನಾಲ್ಕು ವೇದಗಳೂ ಶಿವಮಯವೇ. ಈ ಪರತತ್ವಕ್ಕೆ, ಅಕ್ಷರ ದೇವತೆಗೆ, ಬ್ರಹ್ಮ, ಹರಿ ಭಕ್ತಿಯಿಂದ ವಂದಿಸಿದರು. 'ಶಿವ ಕುಟುಂಬ' ಸಾಂಬ ಸದಾಶಿವನ ಸಂಸಾರ ಅತಿ ರೋಚಕ. ಕೈಲಾಸವಾದ ಶಿವ ಕಲ್ಯಾಣದ ನಂತರ ಹಿಮಗಿರಿಯಲ್ಲಿ ವಾಸವಾದನು. ಉಮಾ ರಮಣನಾದ ಶಂಕರ ಚಂದ್ರಾರ್ಕವಹ್ನಿಧರ ಲೋಚನಾಯ, ತ್ರಿನೇತ್ರ ಶಿವ, ಅಗ್ನಿನೇತ್ರದಿ ಮನ್ಮಥ ದಹನ ಕಾಮೇಶ್ವರ, ಚಿದಾಗ್ನಿ ಕುಂಡದಿ ಸಂಭೂತಳಾದ ಲಲಿತಾ ಕಾಮೇಶ್ವರಿಯನ್ನು ವರಿಸಿದ (ವರ್ಣನೆ ಲಲಿತಾ ಸಹಸ್ರನಾಮ ದಲ್ಲಿದೆ)



ಜಟೆಯಲ್ಲಿ ಗಂಗೆ ಧರಿಸಿ ಗಂಗಾಧರನಾದ. ವಾಮಾಂಕದಿ ಗೌರಿಯನ್ನು ಕುಳ್ಳಿರಿಸಿಕೊಂಡು ಅರ್ಧನಾರೀಶ್ವರ ತತ್ವದಿ ಮೆರೆದ. ಚಂದ್ರನನ್ನು ಧರಿಸಿ ಚಂದ್ರಚೂಡನಾದ. ಚಂದ್ರಮೌಳೀಶ್ವರ ಭಸ್ಮ ರುದ್ರಾಕ್ಷಿ, ಸರ್ಪ ರುಂಡಮಾಲಾಧರ, ಬಿಲ್ವಾರ್ಚನ, ಢಕ್ಕೆ, ಡಮರುಗ, ತ್ರಿಶೂಲ ಧರಿಸಿ ಚಿದಂಬರದಿ ನಟರಾಜ ನೃತ್ಯಭಂಗಿಯಲ್ಲಿ ನಿಂತ. ಅಲ್ಲದೆ ಲಿಂಗರೂಪದಿ ಪೂಜಿತನಾದ. ಭಕ್ತಾನುಕಂಪಿ ಶಿವನು ಜೀವಿಗಳಿಗೆ ಸಾವಿನಲ್ಲಿಯೂ ಲಯಕರ್ತನಾಗಿ ಕರುಣೆ ತೋರಿದ. ಭೂತಗಣಗಳ ಪರಿವಾರ ಸಹಿತ ಗಜಮುಖ, ಷಣ್ಮುಖ ಪುತ್ರರು. ಹರಿಹರ ಬ್ರಹ್ಮಾದಿಗಳಿಂದ ಪೂಜಿತನಾಗಿ ಗಣನಾಯಕನಾದ ಗಣಪತಿ. ಪಿತ ಶಿವಗೆ ಪ್ರಣವಾಕ್ಷರ ಬೋಧಿಸಿದನು ಪರಮಜ್ಞಾನ ಸ್ವರೂಪಿ ಸುಬ್ರಹ್ಮಣ್ಯ.

ಸಂಚಾರಕ್ಕಾಗಿ ಶಿವನಿಗೆ ವೃಷಭ, ಪಾರ್ವತಿಗೆ ಸಿಂಹ, ಗಣಪತಿಗೆ ಇಲಿ, ಷಣ್ಮುಖನಿಗೆ ನವಿಲು. ಇವು ಪರಸ್ಪರ ವೈರ, ವಿರುದ್ಧ ಸ್ವಭಾವದವು. ವೃಷಭವನ್ನು ಕೊಲ್ಲಲು ಸಿಂಹ, ಇಲಿಯನ್ನು ನುಂಗಲು ಸರ್ಪ, ಸರ್ಪವನ್ನು ನುಂಗಲು ನವಿಲು ವೈರದಿಂದ ಕಾಯುತ್ತದೆ. ಗಂಗಾ–ಗೌರಿ ವಿವಾದ ಬೇರೆ. ಇಷ್ಟ–ವಿರುದ್ಧ ಗುಣಗಳಿದ್ದರೆ, ಯಜಮಾನ ವಿಷ ಕುಡಿಯದೆ ಇರುತ್ತಾನೆಯೇ? ಆದರೂ, ಸರ್ವ ಮಂಗಳೆ ವಿಷ ತಡೆ ಹಿಡಿದಳು. ನೀಲಕಂಠನು ಜಗದ್ರಕ್ಷಕ ನಂಜುಂಡೇಶ್ವರನಾದ. ಸ್ಮಿತ ವದನದಿ ಸಂಸಾರ ಗುಟ್ಟು ಬಿಡದೆ ಗಂಟಲಲ್ಲೇ ಇಟ್ಟು 'ದಕ್ಷಿಣಾಮೂರ್ತಿ'ಯಾಗಿ ಶಾಂತಮುದ್ರೆಯಿಂದ ತಪದಿ ಮೈಮರೆತ.

**ಡಿ.ವಿ.ಜಿ.ಯ ತತ್ವಚಿಂತನೆ....**

ಅಸಮದಲಿ ಸಮತೆಯನು ವಿಷಮದಲಿ ಮೈತ್ರಿಯನು।
ಅಸಮಂಜಸದಿ ಸಮನ್ವಯ ಸೂತ್ರನಯವ।
ವೆಸನಮಯ ಸಂಸಾರದಲಿ ವಿನೋದವ ಕಾಣ್ಬ।
ರಸಿಕತೆಯೆ ಯೋಗವೆಲೋ ಮಂಕುತಿಮ್ಮ॥

ಎಲ್ಲಾ ಸಂದರ್ಭದಲ್ಲಿ ಸ್ವಾರಸ್ಯವಾದ ಸಾರವನ್ನು ಹುಡುಕಿ ತೆಗೆಯುವ ಪ್ರವೃತ್ತಿಯೇ ರಸಿಕತೆ. ಅಂತಹ ದೃಷ್ಟಿ ಹೊಂದುವುದೇ ಯೋಗ. ಇದೇ ಶಿವತತ್ವ.


■ **ಭ್ರಮರಾಂಭ ಗೋಪಿನಾಥ್**
**26677574**






ಯುವ ಪ್ರತಿಭೆ

# ಶ್ರೀಮತಿ ಸೌಮ್ಯ ಯೋಗೀಶ್

ನಮ್ಮ ಬೃಹಚ್ಚರಣ ಸಮುದಾಯದಲ್ಲೂ ಗುರಿ, ಸಾಧನೆ, ಹೆಚ್ಚುಗಾರಿಕೆಯುಳ್ಳ ಮಹಿಳೆಯರಿಗೆ ಕೊರತೆ ಇಲ್ಲ. ಕಲೆಗಳನ್ನು ಕರಗತ ಮಾಡಿಕೊಂಡವರು ಹಲವಾರು ಮಂದಿ. ಅಂಥವರಲ್ಲಿ ಶ್ರೀಮತಿ ಸೌಮ್ಯ ಒಬ್ಬರು.

ಸಂಘದ ಸದಸ್ಯ ಶ್ರೀ ಯೋಗೀಶ್‌ರವರ ಪತ್ನಿ, ಹಸಿಗಾಳದ ಕೃಷ್ಣಾ ದಾನಪ್ಪನವರ ಮಗಳು, ಬೆಟ್ಟಕೋಟೆ ಈಶ್ವರಮೂರ್ತಿಯವರ ಸೊಸೆಯಾದ ಪದವೀಧರೆ ಸೌಮ್ಯ. ಚಿತ್ರಕಲಾಪರಿಷತ್ತಿನಲ್ಲಿ ಸಾಂಪ್ರದಾಯಿಕ ಮೈಸೂರು ಶೈಲಿ ಚಿತ್ರಕಲೆಯನ್ನು ತರಬೇತಿ ಪಡೆದು, ಅಭ್ಯಸಿಸಿದ್ದು, ನೂರಾರು ಚಿತ್ರಗಳನ್ನು ರಚಿಸಿ, ಹಲವಾರು ಚಿತ್ರಗಳನ್ನು ನೆನಪಿನ ಕಾಣಿಕೆಯಾಗಿ ಗಣ್ಯರಿಗೆ ನೀಡಿರುತ್ತಾರೆ.


ಕಲಾಚಿತ್ರಗಳನ್ನು ಮೊದಲು ರೇಖಾಚಿತ್ರಗಳಾಗಿ ಬರೆದು, ಬಣ್ಣ ತುಂಬಿ, ಕುಸುರಿ ಕೆಲಸ ಮಾಡುವುದು ಸುಲಭದ ಮಾತಲ್ಲ. ಅವರ ರಾಧಾಕೃಷ್ಣ, ಗಣೇಶ, ಲಕ್ಷ್ಮೀ, ಶಿವ ಪಾರ್ವತಿ ಕಲಾಚಿತ್ರಪಟಗಳು ಜನಮನ್ನಣೆ ಗಳಿಸಿದೆ. ಕರ್ನಾಟಕದ ಅತ್ಯುತ್ತಮ ಕಲಾವಿದೆಯರಲ್ಲಿ ಒಬ್ಬರೆಂದು ಗುರುತಿಸಲ್ಪಟ್ಟಿದ್ದಾರೆ.

–ರಮ್ಯ ಪರಮೇಶ್



# ಮೈಸೂರು ಚಿತ್ರಕಲೆ

ಮೈಸೂರು ಚಿತ್ರಕಲೆಯು ದಕ್ಷಿಣ ಭಾರತದ ಪ್ರಮುಖ ಪ್ರಾಚೀನ ಶಾಸ್ತ್ರೀಯ ಚಿತ್ರಕಲೆಗಳಲ್ಲಿ ಒಂದಾಗಿದೆ. ಮೈಸೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆರಂಭವಾಯಿತು. ನಂತರ ಮೈಸೂರು ಅರಸರು ಈ ಕಲೆಯನ್ನು ಉತ್ತೇಜಿಸಿ ಪೋಷಿಸಿದರು.



ಕರ್ನಾಟಕದಲ್ಲಿ ಈ ಚಿತ್ರಕಲೆಗೆ ಬಹಳ ಹಿಂದಿನ ಇತಿಹಾಸ ಇದೆ. ಅಂದರೆ ಅಜಂತಾ ಕಾಲದಲ್ಲಿಯೇ (ಕ್ರಿ.ಪೂ. 2ರಿಂದ ಕ್ರಿ.ಶ. 7ನೇ ಶತಮಾನ) ಇದರ ಕುರುಹು ದೊರಕಿದೆ. ಮುಂದೆ ವಿಜಯ ನಗರ ಸಾಮ್ರಾಜ್ಯ ಕಾಲದ (ಕ್ರಿ.ಶ. 1136–1565) ಚಿತ್ರಕಲಾ ಪರಂಪರೆ ಯಿಂದ ಮೈಸೂರು ಚಿತ್ರಕಲೆ ಮೂಡಿಬಂತು.



ವಿಜಯನಗರ ಅರಸರು ಕಲೆ, ಸಾಹಿತ್ಯ, ವಾಸ್ತು ವಿನ್ಯಾಸ, ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಪ್ರೋತ್ಸಾಹಿಸಿದರು. ವಿಜಯನಗರ ಸಾಮ್ರಾಜ್ಯವು ತಾಳಿಕೋಟೆ ಯುದ್ಧದ ನಂತರ ಪತನವಾದಾಗ, ಕಲಾವಿದರು, ವಿವಿಧ ಸ್ಥಳಗಳಿಗೆ ಅಂದರೆ ಮೈಸೂರು, ತಂಜಾವೂರು, ಸುರಪುರ ಮತ್ತು ಇನ್ನಿತರ ಸ್ಥಳಗಳಿಗೆ ವಲಸೆ ಹೋದರು. ಆಗ ಚಿತ್ರಕಲಾವಿದರು ತಮ್ಮ ಕಲೆಯೊಂದಿಗೆ ಸ್ಥಳೀಯ ಶಾಸ್ತ್ರೀಯ ಸಂಪ್ರದಾಯ ಕಲೆಗಳನ್ನು ಜೊತೆಗೂಡಿಸಿಕೊಂಡು ಕಲಿತು, ಅಭ್ಯಸಿಸಿ ತಮ್ಮದೇ ಆದ ವಿನೂತನ ಚಿತ್ರಕಲೆಯ ಶೈಲಿಯನ್ನು ಪ್ರಾರಂಭಿಸಿದರು. ಆಗ ಮೈಸೂರು ಚಿತ್ರಕಲೆ, ತಂಜಾವೂರು ಚಿತ್ರಕಲೆ ಪ್ರಚಲಿತವಾಯಿತು.

ಮೈಸೂರು ಚಿತ್ರಕಲೆಯು ಇದರ ವಿಶಿಷ್ಟ ಸೊಬಗಿಗೆ, ವಿಶೇಷ ಬಣ್ಣಗಳಿಗೆ ಪ್ರಸಿದ್ಧವಾಗಿದೆ. ಹಿಂದೂ ಧರ್ಮದ ದೇವಾನುದೇವತೆಗಳನ್ನು ಮತ್ತು ಪ್ರಕೃತಿಯ ದೃಶ್ಯಗಳನ್ನು ಈ ಕಲೆಯಲ್ಲಿ ಪ್ರಮುಖವಾಗಿ ಚಿತ್ರಿಸುತ್ತಾರೆ.

ಸೂಕ್ಷ್ಮ ರೇಖೆಗಳು, ಕುಂಚ ವಿನ್ಯಾಸ, ಮನಸೂರೆಗೊಳ್ಳುವ ಚಿತ್ರಗಳು, ಆಕರ್ಷಕವಾದ ಶುದ್ಧ ಬಣ್ಣಗಳ ಬಳಕೆ ಮೈಸೂರು ಚಿತ್ರಕಲೆಯ ಅಂದವನ್ನು ಹೆಚ್ಚಿಸುತ್ತದೆ. ಅಲಂಕಾರಿಕ ಚಿತ್ರವಸ್ತು ಮಾತ್ರವೇ ಅಲ್ಲದೆ, ನೋಡುಗರ ಭಕ್ತಿ ಮತ್ತು ನಮ್ರತೆಯನ್ನು ಹೆಚ್ಚಿಸುವಂತೆ ಮಾಡುವುದು ಇದರ ವೈಶಿಷ್ಟ್ಯ. ಈ ಕಲೆಯ ಚಿತ್ರಕಾರನ ವ್ಯಕ್ತಿಗತ ಕೌಶಲ್ಯವು ಕಲಾರಸಿಕರಲ್ಲಿ ವಿವಿಧ ಭಾವನೆಗಳನ್ನು ಮೂಡಿಸುವಲ್ಲಿ ಯಶಸ್ವಿಯಾಗಿರುತ್ತದೆ.

*ಸಂಘವು ಯುವ ಕಲಾವಿದೆ ಸೌಮ್ಯ ಯೋಗೀಶ್ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ರಾಜ್ಯ ಹಾಗೂ ರಾಷ್ಟ್ರ ಪ್ರಶಸ್ತಿಗಳು ದೊರೆಯಲೆಂದು ಆಶಿಸುತ್ತದೆ.*



ಸೌಮ್ಯ ಯೋಗೀಶ್

ನಮ್ಮವರು

# ವಿಜ್ಞಾನಿ ಪ್ರೊ. ಮಟ್ಟನಹಳ್ಳಿ ಶ್ರೀನಿವಾಸಯ್ಯ



ಶ್ರೀಯುತ ಎಂ. ಶ್ರೀನಿವಾಸಯ್ಯನವರು ಡಿಸೆಂಬರ್ 5, 1895ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಎಂ.ಲಕ್ಷ್ಮೀನಾರಾಯಣಪ್ಪ ಶಿರಸ್ತೆದಾರರಾಗಿದ್ದರು. ತಾಯಿ ಕುಪ್ಪಮ್ಮ, ಪೂಜ್ಯ ಡಿ.ವಿ.ಜಿ.ಯವರ ಪತ್ನಿಯ ಸಹೋದರಿ. ಶ್ರೀನಿವಾಸಯ್ಯನವರು ಕೋಲಾರದಲ್ಲಿ ಪ್ರೌಢಶಾಲೆಯ ವ್ಯಾಸಂಗ ಮಾಡಿ, ಮೆಟ್ರಿಕ್ ಪರೀಕ್ಷೆಯಲ್ಲಿ ವಿಜ್ಞಾನ ವಿಷಯದಲ್ಲಿ ಅಧಿಕ ಅಂಕ ಗಳಿಸಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. 1918ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದು ನಂತರ ಗೌರಮ್ಮನವರನ್ನು ವಿವಾಹವಾದರು.

ಟಾಟಾ ವಿಜ್ಞಾನ ಮಂದಿರದಲ್ಲಿ 1918ರಲ್ಲಿ ಶಿಷ್ಯವೃತ್ತಿಗಾಗಿ ಭಾರತದಾದ್ಯಂತ ಆಯ್ಕೆಯಾದ 10 ವಿದ್ಯಾರ್ಥಿಗಳಲ್ಲಿ ಕರ್ನಾಟಕದಿಂದ ಆಯ್ಕೆಯಾದ ಏಕೈಕರು. ಅಲ್ಲಿ ಬಯೋಕೆಮಿಸ್ಟ್ರಿ (ಜೀವ ರಸಾಯನ ಶಾಸ್ತ್ರ) ಕ್ಷೇತ್ರದಲ್ಲಿ ಎಫ್.ಐ.ಐ.ಎಸ್.ಸಿ. ಪಡೆದು ತಮ್ಮ ವೃತ್ತಿ ಜೀವನವನ್ನು ಭಾರತೀಯ ವಿಜ್ಞಾನ ಮಂದಿರದಲ್ಲೇ ಪ್ರಾರಂಭ ಮಾಡಿದರು. ತಮ್ಮ ಉತ್ತಮ ಸಂಶೋಧನೆಗಳ ಆಧಾರದ ಮೇಲೆ ಶ್ರೀಯುತರನ್ನು ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದವರು 'ವಿಸಿಟಿಂಗ್ ಪ್ರೊಫೆಸರ್'ಆಗಿ ಆಹ್ವಾನಿಸಿದರು. ಇದರಿಂದ 'ಬೃಹಚ್ಚರಣ ಸಮುದಾಯ'ದಲ್ಲಿ ಲಂಡನ್ ಶ್ರೀನಿವಾಸಯ್ಯ ಎಂದೇ ಗುರುತಿಸಲ್ಪಡುತ್ತಿದ್ದರು.

ಶ್ರೀನಿವಾಸಯ್ಯನವರ ಉತ್ತಮ ವಿಜ್ಞಾನ ಸಂಶೋಧನೆಗಳನ್ನು ಗುರುತಿಸಿ ಅಂದಿನ ಮೈಸೂರು ಸರ್ಕಾರ ಅವರನ್ನು ಮೂರು ವರ್ಷಗಳ ಸ್ಕಾಲರ್ ಶಿಪ್‌ಗಾಗಿ ಆಯ್ಕೆ ಮಾಡಿತು.

ಲಂಡನ್, ಸ್ವೀಡನ್, ಡೆನ್‌ಮಾರ್ಕ್, ಜರ್ಮನಿ, ಫಿನ್‌ಲ್ಯಾಂಡ್‌ಗಳಲ್ಲಿ ತಮ್ಮ ವೈಜ್ಞಾನಿಕ ಸಂಶೋಧನೆಗಳನ್ನು ಮುಂದುವರೆಸಿದರು. ಪ್ರಮುಖವಾಗಿ ಫಿನ್‌ಲ್ಯಾಂಡ್‌ನಲ್ಲಿ ನೊಬೆಲ್ ಪುರಸ್ಕೃತರೊಂದಿಗೆ ಸಂಶೋಧನೆಗಳಲ್ಲಿ ಕೆಲಸ ಮಾಡಿದ್ದು ವಿಶೇಷ. ಸ್ವೀಡನ್‌ನಲ್ಲಿ ಪ್ರಖ್ಯಾತ ವಿಜ್ಞಾನಿ Prof. Euler ಪ್ರಯೋಗಾಲಯದಲ್ಲಿ ಅತಿಥಿ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದಾರೆ. ಖ್ಯಾತ ವಿಜ್ಞಾನಿಗಳಾದ Prof. G. J. Flower ಮತ್ತು Dr. Roland V. Norris ಅವರುಗಳು ಶ್ರೀಯುತರನ್ನು 'ಭಾರತೀಯನೊಬ್ಬನು ಆಧುನಿಕ ಚಿಂತನೆ ಯುಳ್ಳವರಾಗಿ ಭಾರತಕ್ಕಾಗಿ ಸಂಶೋಧನೆ ನಡೆಸುತ್ತಿರುವವರು' ಎಂದು ಹೇಳಿದ್ದಾರೆ.

ಕ್ರೊಮೊಟೊಗ್ರಫಿ ವಿಷಯದಲ್ಲಿ ನಡೆಸಿದ ವಿಜ್ಞಾನ ಸಂಶೋಧನೆಯ ವಿಚಾರವನ್ನು ನೊಬೆಲ್ ಪಾರಿತೋಷಕ ಸಂಸ್ಥೆಗೆ ಮಂಡಿಸಲು ತಡವಾದ್ದರಿಂದ ಶ್ರೀಯುತರು ನೊಬೆಲ್ ಪಾರಿತೋಷಕದಿಂದ ವಂಚಿತರಾದುದು ವಿಷಾದನೀಯ.

ಶ್ರೀಯುತರು ನಂತರ ಭಾರತದಲ್ಲಿ ಲಕ್ನೋದ Central Drug Institute (CSRI) ವಿಭಾಗದಲ್ಲಿ ಬಯೋ ಕೆಮಿಸ್ಟ್ರಿ ಮತ್ತು ಬಯೋ ಫಿಸಿಕ್ಸ್ ವಿಭಾಗಗಳನ್ನು ಸ್ಥಾಪಿಸಿ ಮೂರು ವರ್ಷಗಳ ಕಾಲ ಅಲ್ಲೇ ವೃತ್ತಿಯಲ್ಲಿದ್ದು, ಅನಾರೋಗ್ಯದ ಕಾರಣದಿಂದಾಗಿ ಬೆಂಗಳೂರಿಗೆ ಹಿಂತಿರುಗಿದರು. ಮುಂದೆ IISCನಲ್ಲಿ Fermentation ವಿಭಾಗದ ಮುಖ್ಯಸ್ಥರಾಗಿ ನಿವೃತ್ತಿಯವರೆಗೆ ಸೇವೆ ಮುಂದುವರೆಸಿದರು. ನಿವೃತ್ತಿಯ ನಂತರವೂ ಇನ್ನಿತರ ಸಂಸ್ಥೆಗಳಲ್ಲಿ ವೃತ್ತಿ ಸೇವೆಯ ಅವಕಾಶ ದೊರಕಿದರೂ ತಮ್ಮ ಮಾತಾಪಿತರಿಗಾಗಿ ಎಲ್ಲೂ ಹೋಗದೆ ಬೆಂಗಳೂರಿನಲ್ಲೇ ನೆಲೆಸಿದರು.

ತಮ್ಮ ಸಂಶೋಧನೆಗೆ ಮತ್ತು ಪ್ರಯೋಗಗಳಿಗೆ ಅವಶ್ಯಕವಾದ ಉಪಕರಣಗಳನ್ನು ಸ್ವತಃ ತಾವೇ ಡಿಸೈನ್ ಮಾಡಿ ತಯಾರಿಸಿಕೊಳ್ಳುತ್ತಿದ್ದರು. ಇನ್ನಿತರರಿಗೂ ಅವರ ಅವಶ್ಯಕತೆಗೆ ತಕ್ಕಂತೆ ತಾವೇ ಉಪಕರಣಗಳನ್ನು ತಯಾರಿಸಿಕೊಡುತ್ತಿದ್ದರು. ಏಕೆಂದರೆ ಅಂದಿನ ಕಾಲದಲ್ಲಿ ಇವುಗಳು ಕೊಳ್ಳಲು ಸಿಗುತ್ತಿರಲಿಲ್ಲ. ಇದರಿಂದ ದೊರೆತ ಅನುಭವದ ಮೇಲೆ 'ಸೈಂಟಿಫಿಕ್ ಇನ್‌ಸ್ಟ್ರುಮೆಂಟ್ ಸಿಂಡಿಕೇಟ್' ಎಂಬ ಘಟಕ ಆರಂಭಿಸಿದರು. ಇದು ಭಾರತದಲ್ಲಿ ಮೊಟ್ಟ ಮೊದಲು ಮಾಡಿದ ಪ್ರಯತ್ನ ಮತ್ತು ಈ ಘಟಕ ಯಶಸ್ವಿಯಾಗಿ ಹಲವಾರು ವರುಷ ನಡೆಯಿತು.

ವಿಜ್ಞಾನ ವಿದ್ಯಾರ್ಥಿಗಳಿಗೆ ಪಿಎಚ್.ಡಿ. ಮಾರ್ಗದರ್ಶಕರಾಗಿದ್ದರು. ಹಲವಾರು ನವೀನ ಕ್ಷೇತ್ರಗಳಲ್ಲಿ (ರೇಷ್ಮೆ ಹುಳು, ಶ್ರೀಗಂಧ) ಸಂಶೋಧನೆ ಮಾಡಿ ಯಶಸ್ವಿಯಾದರು. ಇಂದಿಗೂ ಶ್ರೀಯುತರು ಆರಂಭಿಸಿ, ಸಂಶೋಧನೆ ನಡೆಸಿದ ಕ್ಷೇತ್ರಗಳು ಮುಂದುವರೆಯುತ್ತಿದೆ.

ಗಂಧದಗುಡಿಯಾದ ಮೈಸೂರು ಅರಣ್ಯಗಳಲ್ಲಿ ಶ್ರೀಗಂಧದ ಮರಗಳಿಗೆ 'ಸ್ಯಾಂಡಲ್ ಸ್ಪೈಕ್' ಎಂಬ ಪಿಡುಗು ಮರಗಳ ಸಾವಿಗೆ ಕಾರಣವಾಗಿತ್ತು. ಈ ರೋಗ ನಿವಾರಣೆಗೆ ಸಂಶೋಧನೆಗೆ ರಾಜ್ಯ ಅರಣ್ಯ ಇಲಾಖೆಗೆ ಮಾರ್ಗದರ್ಶಕರಾಗಿದ್ದರು. ಪ್ಲಾರಿ ಕಂಪನಿಯು ಚಾಕೊಲೇಟ್ ತಯಾರಿಕೆಗೆ ಬಾರ್ಲಿ ಮಾಲ್ಟ್ ಸಾರವನ್ನು ಕಚ್ಚಾ ವಸ್ತುವಾಗಿ ಬಳಸುತ್ತಿದ್ದರು. ಪ್ಲಾರಿಯು ಭಾರತೀಯ ಬೆಳೆಯಲ್ಲ. ಅದಕ್ಕೆ ಬದಲು ರಾಗಿ ಮಾಲ್ಟ್ ಸಾರವನ್ನು ಬಳಸಬಹುದು ಎಂದು ಕಂಡುಕೊಂಡು ಅದಕ್ಕೆ ಮೊಳಕೆ ಹೆಸರು ಕಾಳು ಬೆರೆಸಿ ಪ್ರೋಟೀನ್ ಅಂಶ ಹೆಚ್ಚಿಸಿದ ತಂತ್ರಜ್ಞಾನ ಅಭಿವೃದ್ಧಿಗೊಳಿಸಿ ಪಾರ್ಲೆ ಕಂಪನಿಗೆ ಮಾರಲು ಸ್ಥಳೀಯ ಕಾರ್ಖಾನೆಗೆ ಮಾರ್ಗದರ್ಶನ ಮಾಡಿದರು.

ಶ್ರೀಯುತರು ಬ್ರಿಟಿಷ್ ಇಂಗ್ಲಿಷ್ ಮಾತನಾಡುವುದರೊಂದಿಗೆ ಜರ್ಮನ್ ಭಾಷೆಯನ್ನೂ ಕಲಿತಿದ್ದರು. ಇವರಿಗೆ ವಿಜ್ಞಾನ ಕ್ಷೇತ್ರ ಮತ್ತು ಸಂಶೋಧನೆಯೇ ಉಸಿರಾಗಿತ್ತು. ವ್ಯಾವಹಾರಿಕ ಜೀವನದಲ್ಲಿ ಅವರ ಧರ್ಮಪತ್ನಿಯ ಸಹಕಾರ ಅಧಿಕವಾಗಿತ್ತು. ಈ ದಂಪತಿಗಳಿಗೆ ಎರಡು ಹೆಣ್ಣು, ಒಂದು ಗಂಡು ಮಕ್ಕಳು, ಶಾರದಮ್ಮ, ಲಕ್ಷ್ಮೀದೇವಿ ಮತ್ತು ವೆಂಕಟೇಶ ಮೂರ್ತಿ.

ಜನವರಿ 16, 1969ರಲ್ಲಿ ಶ್ರೀಯುತರು ನಮ್ಮನ್ನು ಅಗಲಿದರು. ತಮ್ಮ ಅಂತಿಮ ದಿನದ ವರೆಗೂ ವಿದ್ಯಾರ್ಥಿಗಳೊಂದಿಗೆ ವಿಜ್ಞಾನ ಮತ್ತು ಸಂಶೋಧನೆ ವಿಚಾರಗಳಲ್ಲೇ ನಿರತರಾಗಿದ್ದರು. ಅವರಿಗಿದ್ದ ವಿಜ್ಞಾನಾಸಕ್ತಿ, ಕಲಿಕೆಯ ಪ್ರಾಮುಖ್ಯತೆ ಮುಂದಿನ ಜನಾಂಗಕ್ಕೆ ಮಾದರಿಯಾಗಬೇಕಾಗಿದೆ. ಇಂದಿನ ಯುವಜನಾಂಗ ಕೇವಲ ಇಂಜಿನಿಯರಿಂಗ್, ಸಾಫ್ಟ್‌ವೇರ್‌ನತ್ತ ಮಾರುಹೋಗದೆ, ಸಂಶೋಧನಾ ಕ್ಷೇತ್ರದಲ್ಲಿ ಕಾರ್ಯ ಮತ್ತು ಗಮನ ಹರಿಸಬೇಕಾಗುತ್ತದೆ.

ಶ್ರೀನಿವಾಸಯ್ಯನವರಂತಹ ಋಷಿ ವಿಜ್ಞಾನಿಗಳು ನಮ್ಮ 'ಬೃಹಚ್ಚರಣ' ಸಮುದಾಯದವರೆಂದು ಹೇಳಿಕೊಳ್ಳಲು ನಮಗೆಲ್ಲಾ ಹೆಮ್ಮೆ ಎನಿಸುತ್ತದೆ.



–ರಾ. ರಮೇಶ್
9886034048

# ನಾಗಾರಾಧನೆಯಲ್ಲಿ ಗುಸುಗುಸು

ಅಚ್ಚುಕಟ್ಟಾಗಿ ನಾಗಾರಾಧನೆ ನಡೆದರೂ, ಕೆಲವರ ಗುಸು ಗುಸು ಮಾತು ಕೇಳಿದ್ದು

- ಈ ವರ್ಷ ಕ್ಯಾಲೆಂಡರ್ ಏಕೆ ಮಾಡಿಸಿಲ್ಲ ?
- ರೂ. 500ರ ಮೇಲೆ ದೇಣಿಗೆ ನೀಡಿದವರಿಗೆ ಮುಂದಿನ ಬಾರಿಯಾದರೂ ನೆನಪಿನ ಕಾಣಿಕೆ ನೀಡಬಹುದಲ್ಲವೇ?
- ವಯಸ್ಸಾದವರಿಗೆ ಕಟ್ಟೆ ಹತ್ತಲು ಸುಲಭವಾಗುವಂತೆ ಮುಂದಿನ ಬಾರಿಯದರೂ ರೈಲಿಂಗ್ಸ್ ಹಾಕಿಸಬಹುದಲ್ಲವೇ?
- ಬೃಹಚ್ಚರಣ ಪತ್ರಿಕೆಯಲ್ಲಿ ನಮ್ಮ ಸಮುದಾಯದ ವಧು–ವರರ ವಿವರ ಯಾಕೆ ಪ್ರಕಟಿಸಬಾರದು.
- ಧಾರ್ಮಿಕ ಕಾರ್ಯಕ್ರಮದಲ್ಲಿ ಪ್ಯಾಂಟ್–ಶರ್ಟ್, ಜೀನ್ಸ್ ಎಷ್ಟು ಸಮಂಜಸ, ಸಂಘದ ಮನವಿಗೆ ಏಕೆ ಸ್ಪಂದಿಸಬಾರದು?
- ತನಿಯೆರೆಯಲು ಅನುಕೂಲವಾಗುವಂತೆ ದೊಡ್ಡ ಪಾತ್ರೆಯಲ್ಲಿ ನೀರು, ಚೊಂಬು ಇಟ್ಟವರಿಗೆ ಧನ್ಯವಾದ.
- ಸಂಘದವರು ನಾಗಾರಾಧನೆಯನ್ನು ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವಾಗ ಕೆಲವು ಸದಸ್ಯರು ದೀಕ್ಷಿತರ ಮನೆಯ ಶೌಚಾಲಯ ಉಪಯೋಗಿಸುವುದು ಸರಿಯೇ?
- ವಾಹನವನ್ನು ಅಡ್ಡಾದಿಡ್ಡಿ ನಿಲ್ಲಿಸಿ ಇತರರಿಗೆ ತೊಂದರೆ ಮಾಡುವುದು ಎಷ್ಟು ಸಮಂಜಸ?
- ಸಮುದಾಯದ ಮಹಿಳೆಯರು ಕೂಡ ಉತ್ಸವದ ಮೆರವಣಿಗೆಯಲ್ಲಿ ಏಕೆ ಭಾಗವಹಿಸಬಾರದು?
- ಸಂಘದವರು ಆಗಾಗ ಏಕೆ ಕುಟುಂಬ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಿಲ್ಲ.
- ಸಂಗೀತ–ಪ್ರವಾಸ ನಿಂತು ಹೋಯ್ತಾ?

## ಮಕ್ಕಳಿರಾ ಪ್ರಾಸಬದ್ಧ ಪದ ಜೋಡಿಸಿ

ತಿನ್ನಲು ಬೇಕು ಬನ್ನು, ಬರೆಯಲು ಬೇಕು.................

ಪ್ರಯಾಣಕ್ಕೆ ಬೇಕು ರೈಲು, ಕಳ್ಳನಿರುವುದು .................

ನಡೆಯಲು ಬೇಕು ಕಾಲು, ಹೊಡೆಯಲು ಬೇಕು .................

ತಿನ್ನಲು ಬೇಕು ತಿಂಡಿ, ಕಾಸು ಇಡಲು .................

ಕಾಣಲು ಬೇಕು ಕಣ್ಣು, ತಿನ್ನಲು ಬೇಕು .................

ನೋಡಲು ಬೇಕು ಊರು, ತಿರುಗಾಡಲು ಬೇಕು .................

ಮಳೆ ಬಂದರೆ ಕೊಡೆ, ತಿನ್ನಲು ಬೇಕು .................

ಕಂದ ಕಂದ ಬಾರೋ, ಅಂದದ ಮುಖವ .................

ಕೊಡೋ ಕೊಡೋ ಮಿಠಾಯಿ, ಕೊಡುವೆ ನಿನಗೆ .................

ಕಿತ್ತಿಗಾನಹಳ್ಳಿಯಲ್ಲಿ ನಾಗಾರಾಧನೆ, ಭಕ್ತರಿಗೆಲ್ಲಾ .................

**ಸಾಮೂಹಿಕ ಉಪನಯನವು** ಮೇ 11, 2016 ಶಂಕರ ಜಯಂತಿಯ ದಿನದಂದು ಅತ್ತಿಬೆಲೆ ನಂಜುಂಡೇಶ್ವರ ಸನ್ನಿಧಿಯಲ್ಲಿ ಸಹೃದಯ ವಿಪ್ರವೃಂದ ದವರಿಂದ ಏರ್ಪಡಿಸಲಾಗಿದೆ.

ಆಸಕ್ತರು ವಿಚಾರಿಸಿ : 9980945699, 9845176335

## ಪದಬಂಧ–4

| | | | | | | | |
|---|---|---|---|---|---|---|---|
| ■ | ■ | 1 | | | 7 | ■ | ■ |
| 2 | | | ■ | ■ | 3 | | |
| ■ | ■ | 4 | | | | ■ | ■ |
| 5 | | | ■ | ■ | 6 | | |

**ಎಡದಿಂದ ಬಲಕ್ಕೆ**

1. ಪಂಢರೀನಾಥ, ರುಕ್ಮಿಣಿ ಲೋಲ (4)
2 ಕುಂಡಲಗಳ ಜೊತೆ ಇದನ್ನು ಧರಿಸಿದ್ದ ಕರ್ಣ (3)
3. ಜನಕರಾಜನ ಮಗಳು (3)
4. ಜನರ ಮನಸ್ಸು (4)
5. ಇವರು ಅನ್ಯರಂಥಲ್ಲ (3)
6. ಮನಸಾರೆ ಮಾಡಿದ ನಮಸ್ಕಾರ (3)



**ಮೇಲಿನಿಂದ ಕೆಳಗೆ**

1. ಕೃಷ್ಣನ ಶಂಖ (4)
2. ಆನೆ ಮುಖದವನು (4)

**ಎನ್. ಶುಭ ಗಾಯತ್ರಿ**

## ಅಕ್ಷರ ಜ್ಯೋತಿ 'ಅ'–ಜೀವನ ಸಂಬಂಧ

| | | |
|---|---|---|
| ಅಮ್ಮ | : | ಜನ್ಮ ಕೊಟ್ಟವಳು, ಕೊಳ್ಳಲಾಗದವಳು, ವಾತ್ಸಲ್ಯ |
| ಅಪ್ಪ | : | ಆಸರೆ, ಬೆಂಬಲ ನೀಡುವವನು |
| ಅಜ್ಜಿ | : | ಪ್ರೀತಿ, ಒಲವು ನೀಡುವವನು |
| ಅಜ್ಜ | : | ದಾರಿ ತೋರಿ, ಪೋಷಕನಾದವನು |
| ಅಕ್ಕ | : | ಜೀವನ ಪಾಠ ಕಲಿಸಿದವಳು, ಪ್ರೇಮಮಯಿ |
| ಅನುಜೆ | : | ಅಂತಕರಣ ಮಿಡಿದವಳು (ತಂಗಿ) |
| ಅನುಜ | : | ಹಿರಿಯನನ್ನಾಗಿಸಿದವನು. (ತಮ್ಮ) |
| ಅತ್ತೆ | : | ಅಕ್ಕರೆ ತೋರುವಳು |
| ಅಳಿಯ | : | ಮಗ–ಗೆಳೆಯನಾದವನು |
| ಅತ್ತಿಗೆ | : | ಗೌರವ ಪಡೆಯುವವಳು |
| ಅನುರಕ್ತೆ | : | ಪ್ರೇಮ, ಪ್ರೀತಿ ಬಯಸಿದವಳು |
| ಆಪ್ತ | : | ಅನುರಾಗ– ಗೆಳೆತನ ಬೆಳೆಸಿದವರು |
| ಅತಿಥಿ | : | ಸ್ನೇಹ–ಬಂಧುತ್ವ ತೋರುವವನು |
| ಅಂದಗಾತಿ | : | ಮನಸೂರೆಗೊಂಡವಳು |
| ಅನುಭವ | : | ಪಾಠ ಕಲಿಸಿತು |
| ಅನಾಚಾರ | : | ತಬ್ಬಲಿಯನ್ನಾಗಿಸಿತು |
| ಅನಕ್ಷರತೆ | : | ಅನಯಕ್ಕೆ (ತಪ್ಪುದಾರಿಗೆ) ಇಳಿಸಿತ್ತು. |
| ಅಸೂಯೆ | : | ಜೀವನದಿ ಅಣಕವಾಡಿಸಿದುದು |
| ಅಂಜುಗುಳಿ | : | ಧೈರ್ಯವಿಲ್ಲದೆ ಭಯಪಟ್ಟವನು |
| ಅಧಿಕಾರಿ | : | ಅಧೀನನನ್ನಾಗಿಸಿದವ, ವಿಧೇಯತೆ ಬಯಸುವವನು |
| ಅಂಬಿಗ | : | ದಾರಿ ತೋರುವವನು |
| ಅಂತರಾತ್ಮ | : | ಸತ್ಯ ಬಿಚ್ಚಿಟ್ಟವನು |
| ಅಂತರ್ವಾಣಿ | : | ಮನಃಸಾಕ್ಷಿ ಬಿಂಬಿಸುವವನು |
| ಅರಸ | : | ಕಾಪಾಡುವವನು, ಪೋಷಕ |
| ಅಜ | : | ಮರು ಹುಟ್ಟು ಇಲ್ಲದವನು, ಪರಮಾತ್ಮ |
| ಅಧ್ಯಾತ್ಮ | : | ಪರತತ್ವ |
| ಅಂತ್ಯ | : | ಹಿಂದಕ್ಕೆ ಬಾರದ ಸ್ಥಿತಿ. |

**ಮಮತಾ ಎಸ್.**

## ಡಾ. ಡಿ.ವಿ.ಜಿ.ಯವರ 129ನೇ ಹುಟ್ಟುಹಬ್ಬದ ವಿಶೇಷ ಲೇಖನಗಳು

***



### ಡಿ.ವಿ.ಜಿ. ಬದುಕಿ ತೋರಿದ ದಾರಿ

ಡಿ.ವಿ.ಜಿ ಎಂದೇ ಪ್ರಖ್ಯಾತರಾದ ಡಾ. ಡಿ.ವಿ. ಗುಂಡಪ್ಪನವರದು ಅದ್ವಿತೀಯ ಪ್ರತಿಭೆ, ಸಾಹಿತ್ಯ, ರಾಜಕೀಯ, ಸಮಾಜಸೇವೆ ಇಂತಹ ಹಲವು ಕ್ಷೇತ್ರಗಳಲ್ಲಿ ತಮ್ಮ ಅಪೂರ್ವ ಕಾಣಿಕೆ ನೀಡಿದ ಡಿ.ವಿ.ಜಿ. ಜ್ಞಾನದ ಪರ್ವತದಂತಿದ್ದರು. ಇಷ್ಟು ಸಾಧನೆ ಮಾಡಿದ್ದರೂ ಯಾವ ಸನ್ಮಾನಕ್ಕೂ ಮನ ನೀಡಿದವರಲ್ಲ. ಯಾರು ಎಷ್ಟು ಪ್ರಯತ್ನಿಸಿದರೂ ಸನ್ಮಾನದಿಂದ ತಪ್ಪಿಸಿಕೊಳ್ಳುತ್ತಿದ್ದರು. ಅದೇ ಅವರ 'ಜೀವನ ಧರ್ಮ ಯೋಗ' ಗ್ರಂಥಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಾಗ ಎಲ್ಲ ಸ್ನೇಹಿತರ ಅಭಿಮಾನಿಗಳ ಒತ್ತಾಯವನ್ನು ತಳ್ಳಿಹಾಕಲಿಲ್ಲ.

ಅವರ ಸನ್ಮಾನವನ್ನು ಪುರಭವನದಲ್ಲಿ ಆಯೋಜಿಸಲಾಗಿತ್ತು. ಸನ್ಮಾನದ ಅಂಗವಾಗಿ ಡಿ.ವಿ.ಜಿ.ಯವರಿಗೆ ಒಂದು ಲಕ್ಷ ರೂಪಾಯಿಗಳನ್ನು ಗೌರವವಾಗಿ ನೀಡಲಾಯಿತು. ಹಣದ ಚೀಲವನ್ನು ಕೈಯಲ್ಲಿ ಬೆಂಕಿ ಹಿಡಿದಂತೆ ಕಂಡ ಡಿ.ವಿ.ಜಿ. ನಿಟ್ಟೂರು ಶ್ರೀನಿವಾಸರಾಯರನ್ನು ಕರೆದು 'ಈ ಹಣ ಗೋಖಲೆ ಸಾರ್ವಜನಿಕ ಸಂಸ್ಥೆಗೆ ಸೇರಬೇಕು' ಎಂದು ಅವರ ಕೈಗೆ ಒಪ್ಪಿಸಿ ನಿರಾಳರಾದರು. ಆ ಹಣ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ಕೆ ಸೇರಿಹೋಯಿತು.

ಈ ಕಾರ್ಯಕ್ರಮ ನಡೆದ ಮರುದಿನ ಪತ್ರಕರ್ತರೊಬ್ಬರು ಡಿ.ವಿ.ಜಿ.ಯವರ ಮನೆಯ ಹತ್ತಿರ ಅಂಗಡಿಯಲ್ಲಿ ಸಿಗರೇಟು ಕೊಂಡು ಕೊಳ್ಳುತ್ತ ನಿಂತಿದ್ದರು, ಆಗ ಡಿ.ವಿ.ಜಿ.ಯವರ ಮನೆಯ ಹುಡುಗನೊಬ್ಬ ಬಂದು ಒಂದು ಚೀಟಿಯಲ್ಲಿ ಅಂಗಡಿಯ ಮಾಲೀಕನಿಗೆ ಕೊಟ್ಟ ಅವರು 'ಆಗಲಿ ಒಂದು ನಿಮಿಷ ಇರು ಸಾಮಾನು ಕಟ್ಟಿಕೊಡುತ್ತೇನೆ' ಎಂದು ಸಾಮಾನು ಕಟ್ಟತೊಡಗಿದರು. ಪತ್ರಕರ್ತರು ಆ ಚೀಟಿಯಲ್ಲಿ ಏನು ವಿಷಯವಿರಬಹುದು ಎಂಬ ಕುತೂಹಲದಿಂದ ನೋಡಿದರೆ ಅದರಲ್ಲಿ ಬರೆದದ್ದು ಹೀಗೆ. ಮನೆಯಲ್ಲಿ ನೆಂಟರು ಬಂದಿದ್ದಾರೆ. ಕಾಫಿಪುಡಿ, ಸಕ್ಕರೆ ಮತ್ತಿತರ ಸಾಮಾನು ಮುಗಿದು ಹೋಗಿದೆ ತಕ್ಷಣ ಕೊಡಲು ದುಡ್ಡಿಲ್ಲ, ಆಮೇಲೆ ಕೊಟ್ಟರಾದೀತೇ? ಪತ್ರಕರ್ತರು ದಂಗಾಗಿಹೋದರು, ಮನೆಯಲ್ಲಿ ಇಷ್ಟು ಹಣದ ಇಕ್ಕಟ್ಟಿದ್ದರೂ, ನಿನ್ನೆಯೇ ತಮಗೆ ಅರ್ಪಿಸಿದ ಒಂದು ಲಕ್ಷ ರೂಪಾಯಿಗಳನ್ನು ತಮ್ಮದಲ್ಲವೆಂಬಂತೆ ತಕ್ಷಣ ಸಂಸ್ಥೆಯ ಕಾರ್ಯಕ್ಕೆ ನೀಡಿದ್ದರು ಡಿ.ವಿ.ಜಿ.

ಡಿ.ವಿ.ಜಿ.ಯವರ ದೇಹಾವಸಾನದ ನಂತರ ಅವರ ಕೋಣೆಯನ್ನು ಸ್ವಚ್ಛಗೊಳಿಸುವಾಗ ಕಂಡದ್ದು ಇನ್ನೊಂದು ಆಶ್ಚರ್ಯ. ಅವರ ಟ್ರಂಕಿನಲ್ಲಿ ಎಷ್ಟೋ ಚೆಕ್ಕುಗಳಿದ್ದವು, ಡಿ.ವಿ.ಜಿ.ಯವರು ಅವುಗಳನ್ನು ಬ್ಯಾಂಕಿಗೆ ಕಳುಹಿಸದೇ ಹಾಗೆಯೇ ಉಳಿಸಿಕೊಂಡಿದ್ದರು. ಅವು ಯಾವುವೂ ಮರೆವಿನಿಂದ ಆದವುಗಳಲ್ಲ, ಯಾವ ಹಣ ತಮಗೆ ಸಲ್ಲತಕ್ಕದ್ದಲ್ಲವೆಂದು ಅವರಿಗೆ ಅನ್ನಿಸಿತ್ತೋ ಅಂತಹ ಯಾವ ಚೆಕ್ಕನ್ನೂ ಅವರು ಬ್ಯಾಂಕಿಗೆ ಕಳುಹಿಸಿರಲಿಲ್ಲ. ತಮಗೆ ಎಷ್ಟೇ ತೊಂದರೆ ಇದ್ದರೂ ಮತ್ತೊಬ್ಬರನ್ನು ಯಾಚಿಸದೆ ತಮ್ಮದಲ್ಲದ್ದನ್ನು ಪಡೆದುಕೊಳ್ಳದಿರುವ ಪ್ರವೃತ್ತಿ ಡಿ.ವಿ.ಜಿ.ಯವರದು.

ಇದು ದೊಡ್ಡವರು ಬದುಕಿದ ದಾರಿ, ಬದುಕಿ ನಮಗೆ ತೋರಿದ ದಾರಿ.



ಎಸ್. ಶ್ರೀನಿವಾಸಯ್ಯ

## ಭಕ್ತಿ ಭರಿತ : ಭರತ

ಭರತಖಂಡವು ಸತ್ಯ, ಧರ್ಮ ಮತ್ತು ತ್ಯಾಗಗಳ ಆಗರವಾಗಿದೆ. ಅನರ್ಘ್ಯ ರತ್ನಗಳಾಗಿರುವ ರಾಮಾಯಣ, ಮಹಾಭಾರತ ಮತ್ತು ಭಗವದ್ಗೀತೆಗಳು ಧಾರ್ಮಿಕರ ಪೂಜ್ಯ ಗ್ರಂಥಗಳಾಗಿವೆ. ರಾಮಾಯಣ ದಲ್ಲಿ ಬರುವ ಪಾತ್ರಗಳೆಲ್ಲವೂ ಆದರ್ಶವಾಗಿರುವಂತಹವು. ಮಾತಾಪಿತೃ ವಾತ್ಸಲ್ಯ, ಪಿತೃವಾಕ್ಯ ಪರಿಪಾಲನೆ, ಅಣ್ಣ ತಮ್ಮಂದಿರ ಬಾಂಧವ್ಯ, ಸತಿಪತಿಗಳ ಪ್ರೇಮ, ಒಡೆಯ ಮತ್ತು ದಾಸನ ಒಂದು ಅಭೂತಪೂರ್ವ ಸಂಬಂಧ, ರಾಜ ಮತ್ತು ಪ್ರಜೆಗಳಿಗಿರುವ ತಂದೆ ಮಕ್ಕಳ ಪ್ರೀತಿ, ಗೆಳೆತನದಲ್ಲಿರುವ ಒಂದು ಸ್ನೇಹಸವಿ... ಹೀಗೆ ಎಷ್ಟೋ ವಿಷಯಗಳು ಇಂದಿನ ಸಮಾಜಕ್ಕೆ ಮಾದರಿಯಾಗುವಂತಿವೆ. ಅದರಲ್ಲಿ ಒಂದು ಪಾತ್ರ ಭರತ.

ಆದಿಕವಿ ವಾಲ್ಮೀಕಿ ಬರೆದಿರುವ ರಾಮಾಯಣ ಕಥೆ ಇಡೀ ಪ್ರಪಂಚಕ್ಕೆ ತಿಳಿದಿರುವ ವಸ್ತು. ರಾಜ್ಯವನ್ನು ರಾಮನಿಗೆ ಒಪ್ಪಿಸಲು ಚಿತ್ರಕೂಟಕ್ಕೆ ಹೋಗುವ ಭರತನು ರಾಮನ ಆಜ್ಞೆಯ ಮೇರೆಗೆ ರಾಮನ ರಾಜ್ಯವನ್ನು ರಾಮನ ಪರವಾಗಿ ತಾನು 14 ವರುಷಗಳ ಕಾಲ ಹೇಗೆ ನಡೆಸಿದ ಎಂಬುದರ ವಿವರಣೆ ಈ ಗ್ರಂಥದಲ್ಲಿದೆ.

ಭಗವದ್ಗೀತೆಯಂತೆಯೆ ಪೂಜ್ಯ ಡಿ.ವಿ. ಗುಂಡಪ್ಪನವರ 'ಮಂಕುತಿಮ್ಮನ ಕಗ್ಗ' ಕೃತಿಯೂ ಸಹ ಓದಲು ಅರ್ಹವೂ, ಆದರಣೀಯವೂ ಆಗಿದೆ. ಅದರಲ್ಲಿ ಭರತನ ಉದಾಹರಣೆಯನ್ನು ಆರು ಪದ್ಯಗಳಲ್ಲಿ ನೀಡಿದ್ದಾರೆ. ಭರತನ ಭಕ್ತಿ, ಸತ್ಯ, ಧರ್ಮ, ಪ್ರಾಮಾಣಿಕತೆ, ನಿಸ್ಪೃಹತೆ, ಜವಾಬ್ದಾರಿ, ಸೇವೆ, ಕೈಂಕರ್ಯ, ವಿಶ್ವಾಸ ಇವೆಲ್ಲಾ ಗುಣಗಳನ್ನು ಅತ್ಯಂತ ಶ್ಲಾಘನೀಯವಾಗಿ ಚಿತ್ರಿಸಿದ್ದಾರೆ.

1. ಅರಸನಾದ ರಾಮ ಕಾಡಿಗೆ ಹೋದರೂ, ಅವನು ಕೊಟ್ಟ ಪಾದುಕೆಗಳನ್ನು ಸಿಂಹಾಸನದಲ್ಲಿರಿಸಿ, ಅವುಗಳಿಗೆ ಪ್ರತಿದಿನವೂ ರಾಜ್ಯಾಡಳಿತದ ವರದಿಯನ್ನು ಒಪ್ಪಿಸಿ ದೊರೆತನದ ಜವಾಬ್ದಾರಿಯನ್ನು ಹೊತ್ತು ದೊರೆಯಾಗದ ಭರತನಂತಿರು ಎಂದು ಮಾನ್ಯ ಗುಂಡಪ್ಪನವರು ಮಾರ್ಮಿಕವಾಗಿ ತಿಳಿಸುತ್ತಾರೆ.

2. ಒಡೆಯನಾದ ರಾಮನು ಹಿಂತಿರುಗಿ ಬಂದು ಯಾವುದಾದರೂ ಸಮಸ್ಯೆಯನ್ನು ಕೇಳಿದರೆ ತಾನು ಅದಕ್ಕೆ ಉತ್ತರಿಸಬೇಕು ಎಂಬ ಸತ್ಯತೆಯಿಂದ, ಶಾರೀರಿಕವಾಗಿ ಮತ್ತು ಬೌದ್ಧಿಕವಾಗಿ ಜೀವಶಕ್ತಿಗಳು ಅಂದರೆ ಪ್ರಾಣವನ್ನೇ ಭರತ ಮೀಸಲಾಗಿಟ್ಟನು.

3. ಯಾವ ಯಾವ ಸಮಯದಲ್ಲಿ ಯಾವ ಯಾವ ಕರ್ತವ್ಯಗಳನ್ನು ಮಾಡಬೇಕೋ, ಅದೆಲ್ಲವುಗಳನ್ನೂ ನೆರವೇರಿಸುವವನು. ರಾಜ್ಯ ತನ್ನದಲ್ಲವೆಂದು ತಿಳಿದೂ, ಎಲ್ಲಾ ಕಾರ್ಯಗಳನ್ನು ಬಿಡದೆಯೇ ಭರತನು ನೆರವೇರಿಸುತ್ತಾನೆ. ಸ್ವತಂತ್ರನಾಗಿ ರಾಜ್ಯವನ್ನು ನಡೆಸಿದರೂ, ಅದರಲ್ಲಿ ವಿಧೇಯತೆಯನ್ನು ಪಾಲಿಸುತ್ತಾನೆ. ಎಂತಹ ಕಡುಯೋಗಿ ಈ ಭರತ!!

4. ದೊರೆತನದ ತೊಡರುಗಳನ್ನು, ಕುತಂತ್ರಗಳನ್ನು, ಜಟಿಲ ಸಮಸ್ಯೆಗಳನ್ನು ರಾಮನ ತೀರ್ಪಿಗೆಂದು ಉಳಿಸಿದನೆ? ಎಂದು ನಿಬ್ಬೆರಗಾಗಿ ಪ್ರಶ್ನಿಸಿದ್ದಾರೆ ಡಿ.ವಿ.ಜಿ. ಅವರು ತನ್ನ ಬುದ್ಧಿಗೆ ಎಟುಕಿದಂತೆ ಕರ್ತವ್ಯ ಭಾರವನ್ನು ತಾನು ತಿಳಿದು, ಎತ್ತು ನೊಗ ಹೊರುವಂತೆ ಭರತ ಜವಾಬ್ದಾರಿಯನ್ನು ಹೊತ್ತಿದ್ದಾನೆ ಎಂದು ಶ್ಲಾಘಿಸಿದ್ದಾರೆ.

5. ಪ್ರತ್ಯಕ್ಷವಾಗಿರದ ಆ ರಾಮನನ್ನು ನೆನೆದು ಭರತ ನಿಷ್ಠೆಯಿಂದ ಭಕ್ತಿಯಿಂದ ಸೇವೆ ಮಾಡಿದ. ಈ ಆದರ್ಶವನ್ನು ತಿಳಿದು ನೀನು ನಿನ್ನ ಜೀವನದಲ್ಲಿ ತನ್ನತನವನ್ನು ಮರೆತು ಆಸೆಯನ್ನು ತೊರೆದು ಅವನನ್ನು ಅನುಸರಿಸು ಎಂದು ಮನುಕುಲಕ್ಕೆ ಸಂದೇಶವನ್ನು ನೀಡಿದ್ದಾರೆ.

6. ಕೋಸಲ ರಾಜ್ಯವೇ ನಮ್ಮ ಭೂಮಿ. ರಘುವರನೇ ನಮ್ಮ ಪರಮಾತ್ಮ... ನಾವು ಭರತನಂತೆ ಅನುಸರಿಸಿ ನಡೆಯುವವರು.... ನಮ್ಮ ಸಂಸಾರದ ಆಡಳಿತವನ್ನು ಅದು ಏನೇ ಇರಲಿ, ಅದನ್ನು ಭರತನಂತೆ ಭಗವಂತನ ಸೇವೆಯೆಂದು ತಿಳಿದು ಅದನ್ನು ಹರುಷದಿಂದ, ಸಂತೋಷದಿಂದ, ತೃಪ್ತಿಯಿಂದ ಸ್ವೀಕರಿಸು ಎಂದು ಡಿ.ವಿ.ಜಿ.ಯವರು ಉಪದೇಶ ಮಾಡಿದ್ದಾರೆ.

ಭರತನ ಭ್ರಾತೃಪ್ರೇಮವನ್ನು ನಾವು ಅನುಸರಿಸೋಣವೇ.

**ಶ್ರೀಮತಿ ಜಿ.ಪಿ. ಲಕ್ಷ್ಮೀದೇವಿ, ದೂರವಾಣಿ : 23444798**

ಚಿಣ್ಣರ ಅಂಗಳ

## ಅಕ್ಷಯ ಪಾತ್ರೆ

ಒಂದು ಊರಿನಲ್ಲಿ ಒಬ್ಬ ಬಾಲಕಿ ಇದ್ದಳು. ಅವಳು ಪ್ರತಿದಿನ ಕಾಡಿಗೆ ಹೋಗಿ ಕಟ್ಟಿಗೆ ತಂದು ಜೀವನ ಸಾಗಿಸುತ್ತಿದ್ದಳು. ಅವಳು ಪ್ರಾಮಾಣಿಕಳಾಗಿದ್ದಳು. ಒಮ್ಮೆ ಕಾಡಿನ ದೇವತೆ ಈ ಬಾಲಕಿಗೆ ಕಾಣಿಸಿ ಕೊಂಡು 'ಅಕ್ಷಯ ಪಾತ್ರೆ'ಯನ್ನು ವರವಾಗಿ ನೀಡಿ, "ಮಂತ್ರ ಪಠಿಸಿ ಬೇಕಾದುದನ್ನು ಕೇಳಿದರೆ ಅಪೇಕ್ಷಿಸಿದ್ದು ಬರಲಾರಂಭಿಸುವುದು" ಎಂದಳು. ನಿಲ್ಲಿಸಲು ಇನ್ನೊಂದು ಮಂತ್ರವನ್ನು ಹೇಳಿಕೊಟ್ಟಳು. ಬಾಲಕಿಯು ತನಗೆ ಬೇಕಾದಷ್ಟನ್ನು ಮಾತ್ರ ಕೇಳುತ್ತಾ ಪಡೆದು, ನೆಮ್ಮದಿಯಿಂದ ಜೀವಿಸುತ್ತಿದ್ದಳು. ಇದನ್ನು ಕಂಡ ಮುದುಕಿ ಯೊಬ್ಬಳಿಗೆ ಅಸೂಯೆ ಉಂಟಾಗಿ ಬಾಲಕಿಯ ಅಕ್ಷಯಪಾತ್ರೆಯನ್ನು ಕದ್ದಳು. ಮುದುಕಿಗೆ 'ಜೇನುತುಪ್ಪ' ತಿನ್ನಲು ಆಸೆಯಾಯಿತು. ಮಂತ್ರವನ್ನು ಪಠಿಸಿ ಜೇನುತುಪ್ಪ ನೀಡುವಂತೆ ಕೋರಿದಳು. ಜೇನುತುಪ್ಪ ಹರಿದು ಬರಲಾರಂಭಿಸಿತು. ಸಾಕಷ್ಟು ಬಂದ ನಂತರ ಮುದುಕಿಯು 'ಸಾಕು ನಿಲ್ಲಿಸು' ಎಂದು ಹೇಳಿದರೂ, ಜೇನುತುಪ್ಪ ಹರಿದು ಬರುತ್ತಿತ್ತು. ನಿಲ್ಲಿಸುವ ಮಂತ್ರ ಗೊತ್ತಿರಲಿಲ್ಲ. ಊರಿನ ಜನರೆಲ್ಲರೂ ಕೊಚ್ಚಿಹೋಗುತ್ತಿದ್ದರು.

ಆ ವಿಷಯ ಬಾಲಕಿಗೆ ತಿಳಿಯಿತು. ದೋಣಿಯೊಂದರಿಂದ 'ಜೇನಿನ ಹೊಳೆ'ಯಲ್ಲಿ ಅಕ್ಷಯ ಪತ್ರೆಯ ಬಳಿಗೆ ಬಂದು ನಿಲ್ಲಿಸುವ ಮಂತ್ರವನ್ನು ಪಠಿಸಿದಳು. ಜೇನಿನ ಹೊಳೆ ನಿಂತಿತು. ಮುದುಕಿಗೆ ತನ್ನ ತಪ್ಪಿನ ಅರಿವಾಗಿ ನಾಚಿಕೆಯಾಯಿತು.

***ನೀತಿ : ಅತಿ ಆಸೆ ಗತಿ ಕೇಡು***

ದುರಾಸೆಯಿಂದ ನಮ್ಮದಲ್ಲದ ವಸ್ತುಗಳಿಗೆ ಆಸೆಪಟ್ಟು ಕದ್ದರೆ, ದಕ್ಕುವುದೂ ದಕ್ಕುವುದಿಲ್ಲ. ಮಾನ, ಮರ್ಯಾದೆ ಎಲ್ಲವನ್ನೂ ಕಳೆದುಕೊಳ್ಳಬೇಕಾಗುತ್ತದೆ.

**ಸೂರ್ಯ ಕುಮಾರಿ**

## ಕುಗ್ರಾಮದ ಬಡ ಬ್ರಾಹ್ಮಣರು

ಸಾಮಾನ್ಯವಾಗಿ ಬ್ರಾಹ್ಮಣ ಎಂದರೆ ಬಡವ ಎಂಬ ಹಣೆಪಟ್ಟಿಯ ಕಾಲ ಒಂದಿತ್ತು. ಆ ಕಾಲದ ಕಥೆಗಳಲ್ಲಿ ಬ್ರಾಹ್ಮಣರನ್ನು ಬಿಂಬಿಸುವ ಲೇಖಗಳ ಪ್ರಾರಂಭವೇ ಹೀಗಿದ್ದುವಲ್ಲವೆ....!

'ಒಂದಾನೊಂದು ಕುಗ್ರಾಮ, ಅಲ್ಲೊಂದು ಬಡ ಬ್ರಾಹ್ಮಣ ಕುಟುಂಬ!'

ಆ ಸಾಲುಗಳು ಉತ್ಪ್ರೇಕ್ಷೆಯಾಗಿರಲಿಲ್ಲ, ಸತ್ಯ ಸಂಗತಿಯಾಗಿತ್ತು. ಇನ್ನು ದುಡಿಮೆ ಎನ್ನುವುದಾದರೆ ಶಾನುಭೋಗಿಕೆ, ಪೌರೋಹಿತ್ಯ, ಗುಮಾಸ್ತಗಿರಿ, ಅಥವಾ ಉಪಾಧ್ಯಾಯ ವೃತ್ತಿ. ಇತರ ಉದ್ಯೋಗಗಳ ಅವಕಾಶ ವಿರಳವಾಗಿತ್ತು.

ತಮ್ಮ ಬಡತನದಲ್ಲೂ ಆಚಾರ, ವಿಚಾರ, ಶ್ರದ್ಧೆ, ಭಕ್ತಿ, ನಂಬಿಕೆ, ನಿಷ್ಠೆ, ಪ್ರಾಮಾಣಿಕತೆ ಮುಂತಾದವುಗಳ ಬಗ್ಗೆ ಅಪಾರವಾದ ಕಾಳಜಿಯಿತ್ತು. ನೆಂಟರಿಷ್ಟರ ಆಗಮನ, ಅತಿಥಿ ಸತ್ಕಾರಕ್ಕೇನೂ ಕೊರತೆ ಇರಲಿಲ್ಲ. ತಮ್ಮಲ್ಲಿ ಇದ್ದದ್ದನ್ನು ಆದರಪೂರ್ವಕವಾಗಿ ಪ್ರೀತಿಯಿಂದ ಉಣಬಡಿಸುವ ಮನೋ ನೆಲೆ ಇರುತ್ತಿತ್ತು. ಪರಸ್ಪರ ಸ್ನೇಹ, ವಿಶ್ವಾಸಗಳಿಗೆ ಬೆಲೆ ಇರುತ್ತಿತ್ತು. ನಿಷ್ಕಪಟ ಉಭಯ ಕುಶಲೋಪರಿಗಳ ವಿನಿಮಯವಿರುತ್ತಿತ್ತು.

ತಮ್ಮ ಸ್ಥಿತಿಗತಿಗಳು ಹೇಗೇ ಇದ್ದರೂ ಮಕ್ಕಳ ವಿದ್ಯಾಭ್ಯಾಸದತ್ತ ಹೆಚ್ಚಿನ ಗಮನ ಸಾಮಾನ್ಯವಾಗಿತ್ತು. ಮಕ್ಕಳ ವಿದ್ಯೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಲು ಸಿದ್ಧವಿರುತ್ತಿದ್ದರು. ಇಂದಿಗೂ ಎಲ್ಲಾ ಬ್ರಾಹ್ಮಣ ಕುಟುಂಬ ಗಳೂ ವಿದ್ಯೆಗೆ ಪ್ರಾಮುಖ್ಯತೆ, ಆದ್ಯತೆ ನೀಡುತ್ತಿರುವುದು ಶ್ಲಾಘನೀಯ.

ಬದಲಾದ ಕಾಲಘಟ್ಟದಲ್ಲಿ ಅನೇಕ ಸರ್ಕಾರೇತರ ಖಾಸಗೀ ಸಂಸ್ಥೆಗಳು ಅರ್ಹತೆ, ಪ್ರಾಮಾಣಿಕತೆ, ದಕ್ಷತೆಗೆ ಪ್ರಾಶಸ್ತ್ಯ ನೀಡುವ ನಿಲುವಿ ನಿಂದಾಗಿ ವಿದ್ಯಾವಂತ ಬ್ರಾಹ್ಮಣರಿಗೆ ಹೆಚ್ಚು ಉದ್ಯೋಗಗಳು ದೊರಕಲು ಪ್ರಾರಂಭವಾದದ್ದು 1985ರ ನಂತರದ ದಿನಗಳಲ್ಲಿ. ಗ್ರಾಮಾಂತರ ವಿದ್ಯಾರ್ಥಿಗಳು ಸಹಾ ಈ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡು 'ಬಡಬ್ರಾಹ್ಮಣ' ಎಂಬ ಹಣೆಪಟ್ಟಿಯನ್ನು ಕಳಚುವ ಪ್ರಯತ್ನದಲ್ಲಿ ಫಲಕಾರಿಯಾದದ್ದು ಹೆಮ್ಮೆಯ ವಿಷಯ. ಇದರ ಪರಿಣಾಮವಾಗಿ ಇಂದು ಪ್ರತಿ ಕುಟುಂಬದ ಒಂದೆರಡು ಸದಸ್ಯರು ವಿದೇಶದಲ್ಲಿ ಉನ್ನತ ವ್ಯಾಸಂಗ ಅಥವಾ ಉದ್ಯೋಗಗಳಲ್ಲಿರುವುದು ಕಾಣಬಹುದಾಗಿದೆ.

ಸೈಕಲ್ ಇದ್ದ ಜಾಗವನ್ನು ದ್ವಿಚಕ್ರ ವಾಹನ, ನಂತರದ ದಿನಗಳಲ್ಲಿ ಬಗೆ ಬಗೆಯ ಕಾರುಗಳು ಆಕ್ರಮಿಸತೊಡಗಿದವು. ಸೈಟು, ಮನೆ, ಫ್ಲಾಟ್ ಗಳನ್ನು ಕೊಳ್ಳುವ ಆರ್ಥಿಕ ಬಲ ಉಂಟಾಯಿತು ಜೀವನ ಶೈಲಿಯಲ್ಲಿ ಬದಲಾವಣೆಗಳಾದವು, ಆಗುತ್ತಿವೆ.

ಇಲ್ಲಿ ಉದ್ಭವಿಸುವ ಪ್ರಶ್ನೆ ಎಂದರೆ, ಈ ಆರ್ಥಿಕ ಸಬಲತೆ ಬಂದದ್ದಾದರೂ ಹೇಗೆ..? ಮತ್ತು ಪ್ರಮುಖ ಕಾರಣಗಳೇನು ಎಂಬ ಹಿನ್ನೆಲೆಯನ್ನು ಕೆದಕಿದಾಗ, ತಂತ್ರಜ್ಞಾನದ ಆವಿಷ್ಕಾರಗಳಿಂದ ದೊರೆತ ಉದ್ಯೋಗ ಅವಕಾಶಗಳು, ನಾಣ್ಯದ ಒಂದು ಮುಖವಾದರೆ ಮತ್ತೊಂದು ಮುಖ ತಂದೆ ತಾಯಂದಿರ, ಹಿರಿಯರ, ನಡೆ, ನುಡಿ, ಆಚಾರ, ವಿಚಾರ, ಶ್ರದ್ಧೆ, ಭಕ್ತಿ, ಸರಿ ತಪ್ಪುಗಳನ್ನು ತಿದ್ದಿ ಹೇಳಿ, ಸರಿ ಮಾರ್ಗದ ತಿಳುವಳಿಕೆ ನೀಡಿ, ವಿದ್ಯೆಯ ಪ್ರಾಮುಖ್ಯತೆಯನ್ನು ಒತ್ತಿ ತಿಳಿಸುವ ಪ್ರಯತ್ನದ ಫಲ.

ಇಂದಿನ ಪುಟ್ಟ ಮಕ್ಕಳಿಗೆ ಕಷ್ಟದ ದಿನಗಳ ಅರಿವಿಲ್ಲ, ತಮಗೆ ಬೇಕೆನಿಸುವುದು ಕೈಗೆಟುಕುತ್ತಿದೆ. ಮಕ್ಕಳಿಗೆ ನಾವು ಕಳೆದ ಕಷ್ಟಗಳ ದಿನಗಳು, ಸಂದರ್ಭಗಳ ವಿಷಯಗಳನ್ನು ವಿವರಿಸಿ ಅರಿವು ಮೂಡಿಸುವುದು ಬಹಳ ಮುಖ್ಯ. ಮಕ್ಕಳ ಅನಗತ್ಯವಾದ ಆಸೆ ಆಕಾಂಕ್ಷೆ ಬೇಡಿಕೆಗಳನ್ನು ಈಡೇರಿಸುವುದಲ್ಲಿ ಕಡಿವಾಣವಿರಲಿ. ಮಕ್ಕಳ ಚಲನ ವಲನದ ಬಗ್ಗೆ ನಿಗಾ ಇರಲಿ. ನಿರ್ಲಕ್ಷ್ಯ ಎನಿಸುವ ಸಣ್ಣಪುಟ್ಟ ಎಷ್ಟೋ ವಿಷಯಗಳು ಮಕ್ಕಳ ಮುಂದಿನ ಭವಿಷ್ಯದ ಮೇಲೆ ಸಾಕಷ್ಟು ವ್ಯತಿರಿಕ್ತವಾದ ಪರಿಣಾಮ ಬೀರುವ ಸಾಧ್ಯತೆಗಳೇ ಹೆಚ್ಚು.

ನಾವು ಮಕ್ಕಳ ಮೇಲಿನ ವ್ಯಾಮೋಹದಿಂದ ಥಟ್ ಅಂತ ಹೇಳುವ ಸಾಲುಗಳು, "ನಾವು ಪಟ್ಟ ಕಷ್ಟಗಳು ನಮ್ಮ ಮಕ್ಕಳಿಗೆ ಬೇಡ!"

ಹೀಗೆ ಎನಿಸುವುದು ಸಹಜ, ಆದರೆ ನಮ್ಮ ಕಷ್ಟದ ದಿನಗಳು ಕಳೆದು ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ನಾವು ನಡೆದುಬಂದ ದಾರಿ, ಅನುಸರಿಸಿದ ಮಾರ್ಗ, ಪರಿಶ್ರಮದಬಗ್ಗೆ ಆಗಾಗ ಮಕ್ಕಳಿಗೆ ತಿಳಿಹೇಳುವ ಪ್ರಯತ್ನ ಸತತವಾಗಿ ಮುಂದುವರೆಯಲಿ.

ಆಗ ತಾನಾಗೇ ಆಚಾರ ವಿಚಾರ, ಸಂಸ್ಕಾರ, ಪರಂಪರೆ, ಸಾಮಾಜಿಕ ಕಳಕಳಿಯ ಮೊಳಕೆಯೊಡೆದು ಚಿಗುರಿ, ಭದ್ರವಾಗಿ ಬೇರೂರಿ, ಮರವಾಗಿ, ಭವಿಷ್ಯದ ಉನ್ನತಿಯ ಫಲ ಕೊಡಲು ಸಾಧ್ಯ ಹಾಗೂ ಭಗವಂತನ ಅನುಗ್ರಹದೊಂದಿಗೆ ಬೀಜ ನೆಟ್ಟು ಮೊಳಕೆಯೊಡೆದು, ಚಿಗುರಿ, ಬೇರೂರಿ, ಮರವಾಗಿ ಫಲ ನೀಡಿದಲ್ಲಿ ಪರಿಶ್ರಮದ ನೀರೆರೆದ ಪೋಷಕರ ಬದುಕು ಸಾರ್ಥಕ.



**ವಿ.ಎಸ್.ಮಣಿ**
**98450 55582**

## ನಮ್ಮ ಋಷಿಮುನಿಗಳೂ ವಿಜ್ಞಾನಿಗಳು

ಇತ್ತೀಚೆಗೆ ನಾಸಾದ ವಿಜ್ಞಾನಿಗಳು, ಸೂರ್ಯನಿಂದ ಗೋಚರಿಸುವ ಶಬ್ದವನ್ನು ಗ್ರಹಿಸಿ ಹೊಸ ವಿಷಯ ಕಂಡುಹಿಡಿದಿರುವಂತೆ ಜಾಗತಿಕ ಜಾಲತಾಣಗಳಿಂದ ತಿಳಿಯಿತು. ಆ ಶಬ್ದ, ನಮ್ಮ ಋಷಿ ಮುನಿಗಳು, ಹಿಂದೆಯೇ ತಿಳಿಸಿರುವಂಥೆ ಪ್ರಣವ ಮಂತ್ರ – 'ಓಂಕಾರ'.

ಕೆಲವು ವರ್ಷಗಳ ಹಿಂದೆ ತಮಿಳುನಾಡಿನ ಅಂದಿನ ಕರುಣಾನಿಧಿ ಸರ್ಕಾರ, ರಾಮೇಶ್ವರದಿಂದ ಶ್ರೀ ಲಂಕೆಯ ಕಡೆಗೆ ಮುಳುಗಡೆ ಆಗಿರುವ 'ರಾಮಸೇತು'ವನ್ನು ತೆಗೆಸುವ ಪ್ರಯತ್ನ. 'ಗ್ಲೋಬಲ್ ಟೆಂಡರ್' ಮೂಲಕ ತೆಗೆಸುವ ಪ್ರಯತ್ನ ಆಗಲಿಲ್ಲ. ನಂತರದ ದಿನಗಳಲ್ಲಿ ಅಮೆರಿಕದ ಸೆಟಲೈಟ್ ಮೂಲಕ 'ರಾಮಸೇತು' ಅಧ್ಯಯನ ಮಾಡಿದಾಗ ಬಂದ ಫಲಿತಾಂಶ ಪ್ರಕಾರ ಸೇತುವೆ ನಿರ್ಮಾಣ ರಾಮನ ಕಾಲದ್ದೆಂದು ತಿಳಿದು ಬಂದಿದೆ.

ಇತ್ತೀಚೆಗೆ ಮತ್ತೊಬ್ಬ ವಿಜ್ಞಾನಿ ರಾಮನ ಹುಟ್ಟಿದ ದಿನಾಂಕ ಕೃಷ್ಣನ ಜನ್ಮದಿನದ ಕಾಲವನ್ನು ಉಲ್ಲೇಖಿಸಿರುವರು. ಮೇಲ್ಕಂಡ ಅಂಕಿ ಅಂಶಗಳಿಗೆ ನಮ್ಮ ರಾಮಾಯಣ, ಮಹಾಭಾರತದ ಕಾಲಮಾನಕ್ಕೆ ಸಾಮ್ಯವಿರುವುದು ಕಾಣುತ್ತದೆ.

**ನಮ್ಮ ಪಂಚಾಂಗ:** ಇಂದಿಗೂ ವೈಜ್ಞಾನಿಕವಾಗಿ ಕಾಣುವ ಕಾಲ ಗಣನಾ ಪದ್ಧತಿ ಪಂಚಾಂಗ. ಋಷಿಮುನಿಗಳ ಈ ಸಿದ್ಧಾಂತ. ಇಂದಿನ ವಿಜ್ಞಾನಿಗಳಿಗಿಂತ ಮುಂದಿದೆ. ಉದಾ: ಗ್ರಹಣ ವಿಚಾರ, ವರ್ಷದಲ್ಲಿ ಸಂಭವಿಸುವ ಎಲ್ಲ ವಿಚಾರವನ್ನು ಸಾಮಾನ್ಯರಿಗೆ ತಿಳಿಯುವಂತೆ ನಮೂದಿಸಿರುತ್ತೆ. ಆಧುನಿಕ ವಿಜ್ಞಾನದಿಂದ 3 ತಿಂಗಳು ಮುಂಚಿತವಾಗಿ ಮಾತ್ರ ತಿಳಿಯಲು ಸಾಧ್ಯ.

ಪ್ರತಿ ಅವಧಿಯ ಮಳೆಗೆ ನಕ್ಷತ್ರದ ಹೆಸರು, ನಮ್ಮ ಹಿರಿಯರು ಕೊಟ್ಟಿರುವರು. ಸಾಮಾನ್ಯ ಹಳ್ಳಿಯಲ್ಲಿರುವ ರೈತ ಇದನ್ನು ಉಲ್ಲೇಖಿಸುವ ನಲ್ಲವೇ. ಅಂದರೆ ಜನಸಾಮಾನ್ಯರಿಗೆ ತಿಳಿಯುವಷ್ಟು ಸುಲಭವಾಗಿದೆ ಪಂಚಾಂಗ ಪದ್ಧತಿ. ನಮ್ಮ ಪೂರ್ವಜರು ಅಸಮಾನ್ಯರಲ್ಲವೇ!

ಹೀಗಾಗಿ ನಾವಿಂದು ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಭಗವದ್ಗೀತೆ.... ಇವೆಲ್ಲವೂ ನಮ್ಮ ದೇಶದ ಇತಿಹಾಸ ಮತ್ತು ಶಾಸ್ತ್ರ (ವಿಜ್ಞಾನ) ಆಗಿದೆ. ಕಾಲ್ಪನಿಕ ಅಲ್ಲ, ಆದ್ದರಿಂದಲೇ ಭಾರತ ಮಾತೆಯನ್ನು ದೇವಭೂಮಿ, ಪುಣ್ಯಭೂಮಿ, ಮಾತೃಭೂಮಿ, ಕರ್ಮಭೂಮಿ, ಮೋಕ್ಷಭೂಮಿ, ತ್ಯಾಗಭೂಮಿ ಎಂದು ಕರೆಯುವರು.

ನಾವು ಈ ದೇಶದಲ್ಲಿ ಜನ್ಮ ಪಡೆದಿರುವುದೇ ಪುಣ್ಯ ಅಲ್ಲವೇ!

**ಕಾ.ಗೋ. ಸೇತುರಾಮ್**
**97404 44555**






**ಶ್ರೀಮತಿ ಪದ್ಮಜಾ**
ಶಾವಕನಪಲ್ಲಿ, 23608131


## ನನ್ನ ಅಮ್ಮಾ

ಅಮ್ಮಾ, ನೀನು ಕನಸಿನಲ್ಲಿ ಬಂದೆ ಎನಗೆ
ಅದೆಂತಹ ಹುಸಿ ನಗು, ಮುದ್ದು ಮುಖವ ಹೊಂದಿ ।
ಕಷ್ಟ ಕಾರ್ಪಣ್ಯವನ್ನೆಲ್ಲಾ ಮರೆತಂತಿರುವ ನೋಟ
ಏನನ್ನೂ ಯಾರಿಂದಲೂ ಆಶಿಸದ ಜೀವ ॥

ಹಿಂಡು ಮಕ್ಕಳು ಪ್ರೇಮದಿಂದ ಬಂದರೂ
ಕೌಮಾರಿ ಯೌವ್ವನದ ದುಃಖ ಸಹಿಸುತ ।
ಎಲ್ಲರನ್ನೂ ಸಾಕಿ ಸಲಹಿದ ತೃಪ್ತಿಯ ಹೊಂದಿ
ಎಲ್ಲರ ಆದರ ಪಡೆದಳು ನನ್ನ ಮುದ್ದು ಅಮ್ಮಾ ॥

ಅಷ್ಟ ಭೋಗವಿಲ್ಲದಿದ್ದರೂ ಸುಖಕರ ಜೀವನ
ದೇವಾಧಿ ದೇವಿಯರ, ಮುನಿಗಳ, ಸೇವೆಯನು ಮಾಡುತ ।
ತಪ್ಪುಗಳನ್ನು ಮಾಡಿದ ಮಕ್ಕಳನ್ನು ಮನ್ನಿಸಿ
ತನಗೆ ತಿಳಿದ ನಾಲ್ಕು ಅಕ್ಷರಗಳನು ಕಲಿಸಿದಳು ಮಾತೆ ॥

ತನ್ನ ಪತಿಯೇ ದೇವರೆಂದು ತಿಳಿದು
ಬಂಧು ಬಳಗದವರನ್ನೆಲ್ಲಾ ಆದರದಿ ಕಂಡು ।
ಎಲ್ಲರೊಡನೆ ಪ್ರೀತಿ ವಿಶ್ವಾಸದಿಂದ ಬೆರೆತು
ಯಾರಿಗೂ ತಿಳಿಸದೆ ಮರೆಯಾದಳು ನನ್ನ ಅಮ್ಮಾ ॥



**■ಎಂ.ಪಿ. ರಂಗನಾಥನ್**
**94808 61849**

### ಮಕ್ಕಳೇ ಬಣ್ಣ ತುಂಬಿ, ಅಂದ ನೋಡಿ!



## ಸನ್ಮಿತ್ರ

ಮಾನವನಿಗೆ ಮೂವರು ಪರಮಾಪ್ತರಿರುತ್ತಾರೆ. ಅವರಲ್ಲಿ ಮೊದಲಿಗರು ತಾಯಿ-ತಂದೆ, ಎರಡನೆಯವರು ಸನ್ಮಿತ್ರರು, ಮೂರನೆಯ ಸ್ಥಾನದಲ್ಲಿ ಮಕ್ಕಳು. ತಂದೆ-ತಾಯಿ ಮತ್ತು ಮಡದಿ ಮಕ್ಕಳಿಗೆ ನಮ್ಮ ಅಂತರಂಗದ ಶೇ. 90 ಭಾಗ ಪರಿಚಯವಿದ್ದರೆ, ಮಿತ್ರರಿಗೆ ನೂರಕ್ಕೆ ನೂರು ಇರುತ್ತದೆ. ಜೀವನವು ಸಾರ್ಥಕವಾಗ ಬೇಕಾದರೆ ಸನ್ಮಿತ್ರರು ಬೇಕು. ವ್ಯಸನಿ ವ್ಯಕ್ತಿಗಳಿಗೆ ಆಯಾ ವ್ಯಸನಿ ಮಿತ್ರರಿರುತ್ತಾರೆ. 'ಸಮಾನಶೀಲ ವ್ಯಸನೇಷು ಸಖ್ಯ' ಅಂದರೆ ಸಮಾನ ಗುಣ ನಡತೆ, ಅಭ್ಯಾಸಗಳಿದ್ದವರಲ್ಲೇ ಸಖ್ಯ ಬೆಳೆಯುತ್ತದೆ. ಉದಾಹರಣೆಗೆ, ಮದ್ಯ ಸೇವಿಸುವವರು ಮತ್ತು ಇನ್ನಿತರ ದುರಭ್ಯಾಸ ಗಳಿರುವವರಿಗೆ ಅಂತಹವರೇ ಮಿತ್ರರಾಗುತ್ತಾರೆ. ಸ್ವಾರ್ಥದ ನೆಲೆಗಟ್ಟಿನ ಮಿತ್ರತ್ವ ಕ್ಷಣಿಕವಾದುದು. ನಿಜವಾದ ಮಿತ್ರರು ನಮ್ಮ ಕಷ್ಟ, ದೌರ್ಬಲ್ಯಗಳು, ಅಳುಕುಗಳು, ಮಾನಸಿಕ ಏರುಪೇರುಗಳು ಮತ್ತು ಸಂವೇದನೆಗಳಿಗೆ ಸ್ಪಂದಿಸುತ್ತಾರೆ. ಸನ್ಮಿತ್ರರನ್ನು ಜಗತ್ ಚಕ್ಷು ಸೂರ್ಯ ಭಗವಂತನಿಗೆ ಹೋಲಿಸುತ್ತೇವೆ. ಸೂರ್ಯನನ್ನೂ ಮಿತ್ರನೆಂದು ಹೆಸರಿಸಲಾಗಿದೆ. "ಉದ್ಯನ್ನದ್ಯ ಮಿತ್ರಮಹಃ/ ಆರೋಹನ್ನುತ್ತರಾಂ ದಿವಂ/ಹೃದ್ರೋಗಂ ಮಮ ಸೂರ್ಯ ಮರಿಮಾಣಂಚ ನಾಶಯ/" ಯಜುರ್ವೇದ ಎಲೈ ಜಗನ್ಮಿತ್ರನಾದ ಸೂರ್ಯನೇ, ನೀನು ಸಕಲ ಲೋಕಗಳನ್ನು ಬೆಳಗುತ್ತ ಉದಯಿಸು. ನನ್ನ ಹೃದಯ-ಶರೀರಗತ ವ್ಯಾಧಿಗಳನ್ನು ನಿವಾರಿಸು. ಸನ್ಮಿತ್ರನು ನಮ್ಮ ಆದಿವ್ಯಾಧಿಗಳನ್ನು ನಿವಾರಿಸುತ್ತ ಜೀವನವನ್ನು ಬೆಳಗುತ್ತಾನೆ. "ರಹೀಮನ ಸೋಯೀ ಮೀತ್ ಹೈ, ಭೀರ್ ಪರೆ ಠಹರಾಯಿ" ಎಂದು ಮಹಾಕವಿ ರಹೀಮ ಹೇಳುತ್ತಾನೆ. ಕಷ್ಟ ಬಂದಾಗ ಜೊತೆಗಿರುವವನೇ ನಿಜವಾದ ಮಿತ್ರ. "ಕರ್ಣಾಂತಿಕಂ ಪ್ರಾಪ್ತ ಗುಣಂ ಕ್ರಿಯಾಸು". ಕಷ್ಟ-ಸುಖದಲ್ಲಿ ಎಲ್ಲಾ ಕೆಲಸಗಳಲ್ಲಿ ಕಿವಿಯ ಹತ್ತಿರವಿದ್ದು, ಸಲಹೆ, ಸೂಚನೆ ಕೊಡುವವನೇ ನಿಜವಾದ ಮಿತ್ರ. ಸ್ನೇಹ ಬೆಳೆಸುವಾಗ ಚೆನ್ನಾಗಿ ಯೋಚಿಸಿರಿ 'ಪರೋಕ್ಷೆ ಕಾಯ ಹಂತಾರಂ ಪ್ರತ್ಯಕ್ಷೇ ಪ್ರಿಯವಾದಿನಂ/ ವರ್ಜಯೇತ್ತಾದೃಶ ಮಿತ್ರಂ, ವಿಷ ಕುಂಭಂ ಪಯೋ ಮುಖಂ' ಅಂದರೆ ಪರೋಕ್ಷವಾಗಿ ನಮಗೆ ಹಾನಿ ಮಾಡುತ್ತಿರುವ, ಪ್ರತ್ಯಕ್ಷದಲ್ಲಿ ಪ್ರಿಯ ಮಾತುಗಳನ್ನಾಡುವ, ವಿಷವನ್ನು ಉದರದಲ್ಲಿರಿಸಿ ಬಾಯಿಯಿಂದ ಹಾಲು ಸುರಿಸುವ ಮಿತ್ರರಿಂದ ದೂರವಿರಿ. ಉತ್ತಮ ಗೆಳೆತನಕ್ಕೆ ಇತಿಹಾಸ ಪುರಾಣ ಗಳಲ್ಲಿ ಹಲವು ಉದಾಹರಣೆಗಳಿವೆ. ರಾಮ-ಸುಗ್ರೀವರು, ಕೃಷ್ಣ-ಸುದಾಮರು, ಪೃಥ್ವೀರಾಜ್ ಚೌಹಾಣ್ ಮತ್ತು ಚಿದಂಬರದಾಯಿ ಮುಂತಾದವರು ಆದರ್ಶ ಮಿತ್ರರಾಗಿದ್ದರು. ಮಿತ್ರರಲ್ಲಿ ಹಣದ ವ್ಯವಹಾರ ಸರಿಯಲ್ಲ. ಸಹೃದಯತೆ, ಸಮತೆ, ಔದಾರ್ಯ ಬಂಧುತ್ವ ಮತ್ತು ನಿಸ್ವಾರ್ಥತೆ ಮಿತ್ರರ ಲಕ್ಷಣಗಳು.



ಎಸ್. ಶ್ರೀನಿವಾಸಯ್ಯ



## ಅಡುಗೆ ಕಟ್ಟೆ

### ಮಜ್ಜಿಗೆ ಸಾರು

**ಬೇಕಾಗುವ ಪದಾರ್ಥಗಳು**

ಜೀರಿಗೆ 2 ಟೀ ಚಮಚ, ಮೆಣಸು ಅರ್ಧ ಟೀ ಸ್ಪೂನ್, ಕೊತ್ತಂಬರಿ ಸೊಪ್ಪು ಸ್ವಲ್ಪ, ಹುರಿಗಡಲೆ, 5 ಟೀ ಚಮಚ ಕಡಲೆಬೀಜ, ಸ್ವಲ್ಪ ತುಪ್ಪ, ಸಾಸಿವೆ, ಇಂಗು, ಮಜ್ಜಿಗೆ, ಉಪ್ಪು, ಬೆಳ್ಳುಳ್ಳಿ 4 ತೊಳೆ, ಹಸಿ ಮೆಣಸಿನ ಕಾಯಿ ಒಂದು.

**ಮಾಡುವ ವಿಧಾನ :** ಒಗ್ಗರಣೆ ಸಾಮಗ್ರಿಗಳನ್ನು ಬಿಟ್ಟು, ಮೇಲೆ ಹೇಳಿದ ಎಲ್ಲ ಪದಾರ್ಥಗಳನ್ನೂ ಒಟ್ಟಿಗೆ ಮಿಕ್ಸಿಗೆ ಹಾಕಿ ಪುಡಿ ಮಾಡಿ, ನಂತರ ತುಪ್ಪದ ಒಗ್ಗರಣೆಗೆ ಇಂಗು ಹಾಗೂ ಸಾಸಿವೆ, ಹಸಿ ಮೆಣಸಿನ ಕಾಯಿ ಹಾಕಿ, ನಂತರ ರುಬ್ಬಿದ ಪುಡಿಯನ್ನು ಹಾಕಿ ಬಾಡಿಸಿ, ನಂತರ ಮಜ್ಜಿಗೆಗೆ ಸೇರಿಸಿ, ರುಚಿಗೆ ತಕ್ಕಷ್ಟು ಉಪ್ಪನ್ನು ಹಾಕುವುದು.



**ಅರ್ಜುನ್**
ಕನಕಪುರ

## ನೂತನ ಪೋಷಕ ಸದಸ್ಯರು

| | | |
|---|---|---|
| 1. | ಶ್ರೀ ಸತೀಶ್. ವಿ. | ರೂ. 5,000/– |
| 2. | ಶ್ರೀಮತಿ ನಾಗರತ್ನಮ್ಮ. ಡಿ.ಸಿ. | ರೂ. 5,500/– |

## ಸದಸ್ಯತ್ವದಿಂದ ಪೋಷಕರು

| | | |
|---|---|---|
| 1. | ಶ್ರೀ ಬಿ. ಎ. ಸೂರ್ಯಪ್ರಕಾಶ್ | ರೂ. 4,000/– |
| 2. | ಶ್ರೀ ಬಿ. ಎಸ್. ಸತೀಶ್ | ರೂ. 4,000/– |

## ಸಂಘದ ಹೊಸ ಸದಸ್ಯರು

| | | |
|---|---|---|
| 1. | ಶ್ರೀ ಎ.ಕೆ. ವಿಶ್ವನಾಥ ಶರ್ಮಾ | ರೂ. 1,000/– |
| 2. | ಶ್ರೀಮತಿ ಪಾರ್ವತಿ ದೇವಿ | ರೂ. 1,000/– |
| 3. | ಶ್ರೀಮತಿ ಸುಬ್ಬರತ್ನಮ್ಮ | ರೂ. 1,000/– |
| 4. | ಶ್ರೀಮತಿ ವಿಜಯಲಕ್ಷ್ಮಿ ಕೆ. | ರೂ. 1,000/– |
| 5. | ಶ್ರೀ ಕಾರ್ತಿಕ್ ರವಿಕುಮಾರ್ | ರೂ. 1,000/– |
| 6. | ಶ್ರೀ ಅರುಣ್ ಸೇತುರಾಂ | ರೂ. 1,000/– |
| 7. | ಶ್ರೀ ಸುಂದರ್ ಕೆ.ಜಿ. | ರೂ. 1,000/– |
| 8. | ಶ್ರೀ ಆರ್.ವಿ. ರವಿಶಂಕರ್ | ರೂ. 1,000/– |
| 9. | ಶ್ರೀ ವೆಂಕಟೇಶ್ ಎ.ಪಿ. | ರೂ. 1,000/– |
| 10. | ಶ್ರೀ ನಾಗರಾಜ್ ಸುಬ್ಬರಾವ್ | ರೂ. 1,000/– |
| 11. | ಶ್ರೀಮತಿ ದೀಪಿಕಾ ರಾಜೇಶ್ | ರೂ. 1,000/– |
| 12. | ಶ್ರೀ ನಾಗಭೂಷಣ್ ಪದ್ಮನಾಭ್ | ರೂ. 1,000/– |
| 13. | ಶ್ರೀ ಬಾಲಸುಬ್ರಮಣ್ಯ ಶ್ರೀನಿವಾಸ್ | ರೂ. 1,000/– |

## ಸಂಘದ ವಿದ್ಯಾನಿಧಿಗೆ ದಾನಿಗಳು

| | | |
|---|---|---|
| 1. | ಶ್ರೀ ಬಿ.ಎಸ್. ಸೂರ್ಯನಾರಾಯಣ್ | ರೂ. 1000/– |
| 2. | ಶ್ರೀಮತಿ ಅಂಬಾ, ನಡುವತ್ತಿ | ರೂ. 1,100/– |
| 3. | ಶ್ರೀಮತಿ ಜಿ.ಪಿ. ಲಕ್ಷ್ಮೀದೇವಿ | ರೂ. 1,000/– |

# ಸುದ್ದಿ ಮನೆ

## ಉಪನಯನ

ಸಂಘದ ಸದಸ್ಯ ಶ್ರೀ ಸಂಜಯ್ ರಾಜಾಪುರ್ ಹಾಗೂ ಶ್ರೀಮತಿ ರೂಪಾ ಸಂಜಯ್‌ರವರ ಪುತ್ರ ಚಿ.ಆರ್. ಎಸ್. ಶ್ರೇಯಸ್‌ನ (ಸಂಘದ ಸದಸ್ಯ ಶ್ರೀ ಆರ್.ಭಗವಾನ್ ಶ್ರೀಮತಿ ಆರ್. ಛಾಯಾರವರ ಮೊಮ್ಮಗ) ಬ್ರಹ್ಮೋಪದೇಶವು 31.01.2016ರಂದು ಬೆಂಗಳೂರಿನಲ್ಲಿ ನಡೆಯಿತು.

* * *

ಸಂಘದ ಸದಸ್ಯ ಶ್ರೀ ಮುರಳೀಧರ್ ಹಾಗೂ ಶ್ರೀಮತಿ ಲತಾ ಮುರಳೀಧರ್ ಅವರ ಪುತ್ರ ಚಿ. ಸುಭಾಷ್‌ಚಂದ್ರನ ಬ್ರಹ್ಮೋಪ ದೇಶವು ದಿ. 25.02.2016ರಂದು ಬೆಂಗಳೂರಿನಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಸಂಘಕ್ಕೆ ಒಂದು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿ ನೀಡಿರುವುದಕ್ಕೆ ಸಂಘವು ಆಭಾರಿ.

* * *

ಸಂಘದ ಸದಸ್ಯ ಶ್ರೀಮತಿ ಮತ್ತು ಶ್ರೀ ಕಲ್ಯಾಣರಾಮನ್‌ರವರ ಪುತ್ರ ಉದಯಕಲ್ಯಾಣ್ 28.03.2016ರಂದು ಬೆಂಗಳೂರಿನಲ್ಲಿ ಉಪನಯನ ಜರುಗಿತು.

***ವಟುಗಳಿಗೆ ಸಂಘವು ಶುಭ ಹಾರೈಸುತ್ತದೆ.***

## ಅಭಿನಂದನೆ

ಸಂಘದ ಉಪಾಧ್ಯಕ್ಷ ಶ್ರೀ ಎಚ್.ಕೆ. ಶಶಿಧರ್ ಅವರ ತಂದೆ ಹಾಗೂ ಸಂಘದ ಪೋಷಕರಾದ ಶ್ರೀ ಹೆಚ್. ಕೃಷ್ಣಸ್ವಾಮಿಯವರಿಗೆ 'ಸಹಸ್ರ ಚಂದ್ರದರ್ಶನ ಶಾಂತಿ ಮಹೋತ್ಸವವು (81ನೇ ವರ್ಷದ ಹುಟ್ಟುಹಬ್ಬ) 31.01.2016ರಂದು ಬೆಂಗಳೂರಿನಲ್ಲಿ ನೆರವೇರಿತು.

* * *

ಸಂಘದ ಶ್ರೀ ಅಶ್ವಥ್ ನಾರಾಯಣ್ ಅವರಿಗೆ 'ಭೀಮರಥ ಶಾಂತಿ' (70 ವರ್ಷಗಳು) ಇತ್ತೀಚೆಗೆ ಬೆಂಗಳೂರಿನಲ್ಲಿ 31.01.2016ರಂದು ನೆರವೇರಿತು.

**ಸಂಘವು ಶ್ರೀಯುತರುಗಳಿಗೆ ಆರೋಗ್ಯ ನೆಮ್ಮದಿ ಸದಾ ದೊರೆಯಲೆಂದು ಆಶಿಸುತ್ತದೆ.**

## ಗೃಹಪ್ರವೇಶ

ಬೃಹಚ್ಚರಣ ಸಂಘದ ಪೋಷಕರಾದ ಶ್ರೀ ಎಚ್.ಆರ್. ಬದ್ರೀನಾಥ್‌ರವರು ಇದೇ ತಾ. 25.03.2016ರಂದು ಬೆಂಗಳೂರು ವಿದ್ಯಾರಣ್ಯಪುರದಲ್ಲಿ ತಮ್ಮ ನೂತನ ಗೃಹಕ್ಕೆ ಪ್ರವೇಶಿಸಿದರು.

* * *

ಸಂಘದ ಸದಸ್ಯರಾದ ಕೆ.ಸಿ. ಜಯರಾಂರವರು 25.03.2016ರಂದು ಬೆಂಗಳೂರು ಗಿರಿನಗರದಲ್ಲಿ ನೂತನ ಗೃಹಪ್ರವೇಶ ಮಾಡಿದರು.

* * *

ಸಂಘದ ಸದಸ್ಯರಾದ ಸಿ. ಮುರಳಿಕೃಷ್ಣರವರು ತಾ. 28.02.2016ರಂದು ಬೆಂಗಳೂರಿನ ಹನುಮಂತನಗರದಲ್ಲಿ ಗೃಹಪ್ರವೇಶ ಮಾಡಿದರು.

***ಸಂಘವು ಶ್ರೀಯುತರುಗಳಿಗೆ ಶುಭ ಕೋರುತ್ತದೆ***

## ವಿವಾಹ

ಸಂಘದ ಸದಸ್ಯರಾದ ಶ್ರೀಮತಿ ಶ್ರೀದೇವಿ ಮತ್ತು ಶ್ರೀ ಬಾಲಸುಬ್ರಹ್ಮಣ್ಯರವರ ಮಗಳು ಚಿ. ಸೌಮ್ಯರವರ ವಿವಾಹವು ಚಿ. ಕಶ್ಯಪ್ ಕೊಟ್ಟೂರುರವರೊಂದಿಗೆ 18.03.2016ರಂದು ಬೆಂಗಳೂರಿನಲ್ಲಿ ನೆರವೇರಿತು.

***ಬೃಹಚ್ಚರಣ ಸಂಘವು ನವ ವಧು–ವರರಿಗೆ ಶುಭ ಹಾರೈಸುತ್ತದೆ.***

# ವಾರ್ತಾ ಚಿತ್ರಗಳು



**ಸಂಘದ ಪೋಷಕರೂ, ಗೌರವ ಉಪಾಧ್ಯಾಯರೂ ಹಾಗೂ ನಮ್ಮೆಲ್ಲರ ಹಿತೈಷಿಗಳಾದ ಬಿನ್ನಮಂಗಲ ಎಸ್. ಪದ್ಮನಾಭರವರಿಗೆ ತೊಂಬತ್ತು ವರ್ಷದ ಹುಟ್ಟುಹಬ್ಬ ವನ್ನು ಎನ್.ಆರ್. ಕಾಲೋನಿಯ ಶ್ರೀರಾಮ ದೇವಸ್ಥಾನದ ಸಭಾಂಗಣದಲ್ಲಿ ಹಿತೈಷಿಗಳು, ಶಿಷ್ಯರು, ಕುಟುಂಬದವರು ಸೇರಿ ವಿಜೃಂಭಣೆಯಿಂದ ಆಚರಿಸಿ ಆಶೀರ್ವಾದ ಪಡೆದರು.**

***

**ವಿದ್ಯಾಕ್ಷೇತ್ರದಲ್ಲಿ ಶ್ರೀ ಬಿ.ಎಸ್.ಪಿ. ಅವರ ಸೇವೆಯನ್ನು ಗುರುತಿಸಿ ಶ್ರೀಯುತರಿಗೆ ಉದಯಭಾನು ಕಲಾಸಂಘವು 21.02.2016 'ಸುವರ್ಣ ವಿದ್ಯಾರತ್ನ' ಎಂಬ ಗೌರವ ಪುರಸ್ಕಾರ, ಪ್ರಶಸ್ತಿ ನೀಡಿದೆ. ಸಂಘವು ಶ್ರೀಯುತರಿಗೆ ಶುಭ ಕೋರುತ್ತದೆ.**



**ಸಂಘದ ಪೋಷಕ ಶ್ರೀ ಗಣೇಶ್‌ಕುಮಾರ್‌ರವರ ತಾಯಿ ಶ್ರೀಮತಿ ಮಂಗಳಾ ಕೃಷ್ಣಮೂರ್ತಿಯವರು ನಾಡಿನ ಸರ್ವತೋಮುಖ ಅಭಿವೃದ್ಧಿಗಾಗಿ ಸಮಾಜ ಸೇವೆ ಸಲ್ಲಿಸಿರುವುದನ್ನು ಸ್ಮರಿಸಿ ಉದಯಭಾನು ಕಲಾಸಂಘವು 21.02.2016 ರಂದು 'ಸುವರ್ಣ ಸಮಾಜ ಸೇವಾರತ್ನ' ಗೌರವ ಪುರಸ್ಕಾರ ನೀಡಿರುವ ಈ ಶುಭ ಸಂದರ್ಭದಲ್ಲಿ ಸಂಘವು ಶ್ರೀಮತಿ ಮಂಗಳಾ ಕೃಷ್ಣಮೂರ್ತಿಯವರಿಗೆ ಶುಭ ಹಾರೈಸುತ್ತದೆ**

***

**ಸಂಘದ ಸದಸ್ಯ ಶ್ರೀ ಆರ್.ಎಸ್. ಪ್ರಶಾಂತ್ ಹಾಗೂ ಶ್ರೀಮತಿ ನಳಿನಿಯವರ ಪುತ್ರ ಚಿ. ಆದಿತ್ಯರಾಮ್ (11) ಇತ್ತೀಚೆಗೆ ಚೆನ್ನೈನಲ್ಲಿ ನಡೆದ 'ಬ್ರೈನ್ ಓ ಬ್ರೈನ್ ಅಬಕಸ್' ಸ್ಪರ್ಧೆಯಲ್ಲಿ ಬೆಳ್ಳಿ ಅತ್ಯುತ್ತಮ ಪದಕ' ಹಾಗೂ 'ಪ್ರಶಸ್ತಿಪತ್ರ' ಪಡೆದಿರುವುದಕ್ಕೆ ಸಂಘ ಅಭಿನಂದಿಸುತ್ತದೆ.**



## ಓದುಗರ ಪತ್ರಗಳು




### ಸ್ಪಂದನೆ–

ಶ್ರೀ ಟಿ.ಎಲ್. ರಾಮಚಂದ್ರನ್‌ರವರಿಗೆ ನಮಸ್ಕಾರಗಳು.

ತಮ್ಮ 5.2.2016ರ ಪತ್ರದಲ್ಲಿ ಸೂಚಿಸಿರುವ ಸಲಹೆಯು ಸೂಕ್ತವಾಗಿದ್ದು, ಇದರ ಬಗ್ಗೆ ಗಮನ ಹರಿಸುತ್ತೇವೆ. ತಾವು ಸಂಘದ ಚಟುವಟಿಕೆಗಳನ್ನು ಮೆಚ್ಚಿರುವುದಕ್ಕೆ ಧನ್ಯವಾದ

✦ ✦

ಶ್ರೀ ಎಂ.ಪಿ. ರಂಗನಾಥನ್‌ರವರಿಗೆ ನಮಸ್ಕಾರಗಳು

ತಾವು 'ಬೃಹಚ್ಚರಣ' ಸಂಚಿಕೆಗಳ ಬಗ್ಗೆ ಶ್ಲಾಘಿಸಿರುವುದಕ್ಕೆ ಧನ್ಯವಾದ. ತಮ್ಮ ಪತ್ರ 15.02.2016ರಲ್ಲಿ ಇಂಗ್ಲಿಷ್ ಭಾಷೆಯಲ್ಲಿನ ಪ್ರಬಂಧಗಳನ್ನೂ 'ಬೃಹಚ್ಚರಣ'ದಲ್ಲಿ ಮುದ್ರಿಸಲು ಸಲಹೆ ನೀಡಿರುವಿರಿ. ಇದರ ಬಗ್ಗೆ ಸಂಪಾದಕ ಮಂಡಳಿ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳುತ್ತದೆ.

✦ ✦

ಶ್ರೀ ವಿಕ್ರಂರವರಿಗೆ ನಮಸ್ಕಾರಗಳು.

ತಾವು ಆಂಗ್ಲಭಾಷೆಯಲ್ಲಿ ಯೋಗದ ಬಗ್ಗೆ ಕಳುಹಿಸಿರುವ ಲೇಖನವನ್ನು ದಯವಿಟ್ಟು ಕನ್ನಡಕ್ಕೆ ಭಾಷಾಂತರ ಮಾಡಿ ಒಂದು ಪುಟದಷ್ಟು ಮಾತ್ರ ಬರೆದು ಕಳುಹಿಸುತ್ತೀರೆಂದು ನಂಬಿದ್ದೇವೆ.

✦ ✦

ಮಾನ್ಯ ಶ್ರೀ ಎಸ್. ಶ್ರೀನಿವಾಸಯ್ಯನವರಿಗೆ ನಮಸ್ಕಾರ.

ತಮ್ಮ ದಿ. 8.2.2016ರ ಪತ್ರ ಲೇಖನಗಳೊಂದಿಗೆ ತಲುಪಿದೆ. ಲೇಖನಗಳನ್ನು ಸಂಪಾದಕ ಮಂಡಳಿಯ ತೀರ್ಮಾನದಂತೆ ಪ್ರಕಟಿಸಲಾಗುವುದು.

✦ ✦

ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ ಪದಬಂಧದ ಕೆಲವು ದೋಷ ನಮ್ಮ ಗಮನಕ್ಕೆ ಹಲವಾರು ಮಂದಿ ತಂದಿರುವಿರಿ. ದೋಷಕ್ಕೆ ಕ್ಷಮೆ ಯಾಚಿಸುತ್ತೇವೆ.

ಸಂ.

### ಪದಬಂಧ–4ರ ಉತ್ತರ

| | | | | | | | |
|---|---|---|---|---|---|---|---|
| | | 1 ಪಾಂ | ಡು | ರಂ | 7 ಗ | | |
| 2 ಕ | ವ | ಚ | | | 3 ಜಾ | ನ | ಕಿ |
| | | 4 ಜ | ನ | ಮ | ನ | | |
| 5 ಅ | ನ | ನ್ಯ | | | 6 ನ | ಮ | ನ |

## ಪ್ರಸಾದ ವಿತರಣೆಯ ಬಗ್ಗೆ...

ಪ್ರತಿ ವರ್ಷ ಫಾಲ್ಗುಣ ಶುದ್ಧ ಪಂಚಮಿಯಂದು ಆಚರಿಸುವ 'ನಾಗಾರಾಧನೆ ಮತ್ತು ಷಷ್ಠಿ'ಯಂದು 'ಶ್ರೀ ಶ್ರೀನಿವಾಸ ದೇವರ ಬ್ರಹ್ಮೋತ್ಸವ' ಕಾರ್ಯಕ್ರಮಗಳು ಬಹಳ ಅಚ್ಚುಕಟ್ಟಾಗಿ ಈ ವರ್ಷವೂ ನೆರವೇರಿದ್ದು ಸಂತೋಷ.

ವರ್ಷ ವರ್ಷಕ್ಕೂ ಒಂದೊಂದು ರೀತಿಯಲ್ಲಿ ಸಂಘದಿಂದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿರುವುದು ಎಲ್ಲರ ಗಮನಕ್ಕೂ ಬಂದಿರುತ್ತದೆ. ಈ ಕಾರ್ಯಕ್ರಮವು ಒಂದು ಮನೆಯ ಹಬ್ಬ ಹರಿದಿನದಂತೆ ನಡೆದು ಎಲ್ಲರ ಗಮನವನ್ನು ಸೆಳೆಯುತ್ತಿದೆ.

ನಮ್ಮ ಅನಿಸಿಕೆಯಂತೆ ಈ ವರ್ಷಗಳಲ್ಲಿ ನನಗೆ ಕಂಡ ಅಭಿವೃದ್ಧಿ ಯಾವುದೆಂದರೆ, 'ಪ್ರಸಾದ ವಿನಿಯೋಗ' ಬಹಳ ಅಚ್ಚುಕಟ್ಟಾಗಿ ನಡೆಯಿತು. ಯಾವಾಗಲೂ ನಾಗಪ್ಪನಿಗೆ 'ತನಿ ಎರೆದು' ಪ್ರಸಾದ ಊಟ ಮಾಡಿ ಮನೆಗೆ ತೆರಳುತ್ತಿದ್ದೆವು. ಮನೆಯಿಂದ ಬರದೇ ಇರುವ ಕುಟುಂಬದವರಿಗೆ ಸ್ವಲ್ಪ ಪ್ರಸಾದ ತೆಗೆದುಕೊಂಡು ಹೋಗಲು ಸಿಗುತ್ತಿರಲಿಲ್ಲ. ಆದರೆ ಈ ಸಲ ಆ ರೀತಿ ಆಗದೆ ಕವರ್‌ಗಳಲ್ಲಿ ವಡೆಗಳನ್ನು ಕೊಟ್ಟಿದ್ದು ಬಹಳ ಸಮಾಧಾನವಾಗಿದೆ.

ದೇವಸ್ಥಾನದಲ್ಲಿ ಅರ್ಚನೆ, ಪೂಜೆ ಮಾಡಿಸಿದ ಭಕ್ತಾದಿಗಳಿಗೆ, ದೇವಸ್ಥಾನದ ಹೊರವಲಯದಲ್ಲಿ ತೀರ್ಥ, ಪ್ರಸಾದ, ಕುಂಕುಮ ವಿತರಣೆ ಬಹಳ ಮನಸ್ಸಿಗೆ ಮುದ ನೀಡಿತು. ಯಾವ ತೊಂದರೆಯೂ ಇಲ್ಲದೆ, ನೂಕು ನುಗ್ಗಲು ಇಲ್ಲದೆ ಎಲ್ಲ ಭಕ್ತಾದಿಗಳಿಗೂ ಪ್ರಸಾದವನ್ನು ವಿತರಿಸುವ ಈ ಯೋಜನೆ ಬಹಳ ಸಂತೋಷ ಕೊಟ್ಟಿದೆ.

ಸಂಘದ ಸಹಕಾರದಿಂದ ಎಲ್ಲಾ ದೇವತಾ ಕಾರ್ಯಕ್ರಮಗಳೂ ಯಾರಿಗೂ ತೊಂದರೆ ಆಗದಂತೆ ನಡೆಸಿಕೊಂಡು ಹಾಗೂ ಅಭಿವೃದ್ಧಿಯ ಕಡೆಗೆ ಗಮನಹರಿಸಿ, ಎಲ್ಲರ ಸಹಕಾರದಿಂದ ನಾಗಾರಾಧನೆ ಕಾರ್ಯಕ್ರಮ ಇನ್ನೂ ಸುಗಮವಾಗಿ ನಡೆಯಲಿ ಎಂದು ಆಸೆ ಪಡುತ್ತೇನೆ.

ಕಿತ್ತಿಗಾನಹಳ್ಳಿಯೊಳಗೆ ಹೋಗುವ ಹೆದ್ದಾರಿಯಲ್ಲಿ ದೊಡ್ಡದಾಗಿ ಊರ ಹೆಸರು ಹಾಗೂ ಕ್ಷೇತ್ರದ ಬಗ್ಗೆ ಫಲಕವನ್ನು ಹಾಕಬೇಕೆಂದು ಈ ಮೂಲಕ ನಮ್ಮ ಕೋರಿಕೆ.

**ಛಾಯಾ ಭಗವಾನ್, ಕೆ. ಗೋವಿಂದರಾಜು,**
**ಶ್ರೀಕಾಂತ್, ಭಾರತಿ, ಗೀತಾ, ಹೇಮಲತಾ**

Book-Post

To,

*If un Delivered please return to :*
*President*
**'Brihacharana Sangha'** No. 8, 3rd Cross, Annaiyyappa Block, Kumarapark West, Bengaluru-560 020.

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. E-mail: ilaprinters@gmail.com